2020

KM

Question Booklet Sl.No.

8005448

04/10/2020

# QUESTION BOOKLET – PAPER – I
## (KANNADA MEDIUM ONLY)

SUBJECTS : Language – I, Language – II, Child Development and Pedagogy, Mathematics and Environmental Science

Maximum Marks : 150 | 09.30. A.M. to 12.00 P.M. | Max. Time : 2.30 Hours

## INSTRUCTIONS TO THE CANDIDATES (Read Carefully)

Note : Candidates are instructed to confirm

- Whether pre-printed O.M.R. has your name and register number printed on it.
- Whether pre-printed O.M.R. Sheet No. and QP Booklet No. are same.
- If the candidate uses the O.M.R./QP booklet which doesn't belong to him/her, such O.M.R. sheets are not considered for evaluation.

1. The sealed Question Booklet contains 150 questions. The O.M.R. Answer Sheet is given separately. Verify whether the given Question Booklet is of the same PAPER and MEDIUM as the candidate opted in the application.
2. The Questions are printed in Kannada and English Medium. But in any case of any discrepancies / doubt the question in English Medium is considered as valid.
3. The Question Paper contains five Parts I, II, III, IV and V consisting of 150 Objective Type questions, EACH QUESTION CARRYING ONE MARK.

| Parts | Subjects | Q.No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 45 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 46 to 89 |
| Part – III | Child Development and Pedagogy (Kannada) – III | 61 to 90 | 90 to 94 |
| Part – III | Child Development and Pedagogy (English) – III | 61 to 90 | 95 to 98 |
| Part – IV | Mathematics (Kannada) – IV | 91 to 120 | 99 to 105 |
| Part – IV | Mathematics (English) – IV | 91 to 120 | 106 to 111 |
| Part – V | Environmental Science (Kannada) – V | 121 to 150 | 112 to 118 |
| Part – V | Environmental Science (English) – V | 121 to 150 | 119 to 124 |

4. **Part – I contains 30 Questions for the Language–I and Part–II contains 30 Questions for the Language–II. In this Question Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part–II (Language–II) in any Language other than the Language chosen in the Part–I (Language–I).
6. **Questions related to Part–III : Child Development and Pedagogy (Q.No. 61 to 90), Part–IV : Mathematics (Q.No. 91 to 120) and Part–V : Environmental Science (Q.No. 121 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the oval must be made with BLUE OR BLACK BALL POINT PEN ONLY. Any alteration in the answer counts as invalid.**
8. Each candidate is given carbonless O.M.R. sheet along with the original O.M.R. answer sheet. Candidate should return the ORIGINAL O.M.R. ANSWER SHEET TO THE ROOM SUPERVISOR and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

SEAL

2019

Visit CollegeDekho

# PART – I

## ಭಾಷೆ – I

## ಕನ್ನಡ

ಸೂಚನೆ : ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು 1 ರಿಂದ 8 ಪ್ರಶ್ನೆಗಳಿಗೆ ಉತ್ತರಿಸಿರಿ.

ನಮ್ಮ ಊರ ನಾಣಿಯ ಪರಿಚಯ ಸ್ವಲ್ಪ ನಿಮಗೆ ಮಾಡಿಕೊಡಬೇಕು. ನಾಣಿಯ ಪೂರ್ಣವಾದ ಹೆಸರು ನಾರಾಯಣಯ್ಯಂಗಾರ್ ಎಂದು. ಅವನಿಗೆ ವಯಸ್ಸು ನಲವತ್ತು ಇರಬಹುದು. ಇಪ್ಪತ್ತೆರಡನೆಯ ವಯಸ್ಸಿನಲ್ಲಿಯೇ ಮದುವೆಯಾಗಿ ವಿಧುರನಾದನು. ಈಚೆಗೆ ಅನೇಕರು ಹೇಳಿದರೂ ಎರಡನೆಯ ಮದುವೆ ಮಾಡಿಕೊಳ್ಳಲಿಲ್ಲ. ಅವನಿಗೆ ಸ್ವಲ್ಪ ಪಿತ್ರಾರ್ಜಿತವಾದ ಆಸ್ತಿ ಇದೆ. ಅವನ ಅವಶ್ಯಕತೆಗಳು ಹೆಚ್ಚಾಗಿಲ್ಲವಾದುದರಿಂದ ಇದ್ದುದರಲ್ಲಿಯೇ ಸಾಲಗಾರನಾಗದೆ ಮಿತವ್ಯಯದಿಂದ ಸುಖಿಯಾಗಿದ್ದಾನೆ.

ಜೋಡಿದಾರರಿಗೂ ಅವನಿಗೂ ಬಹಳ ಸ್ನೇಹ. ಅವರೇ ಅವನನ್ನು ಮೊದಲು 'ನಾಣಿ' ಎಂದು ಕರೆಯುವುದಕ್ಕೆ ಪ್ರಾರಂಭಿಸಿದರು. ಈಚೆಗೆ ಎಲ್ಲರೂ ಅವನನ್ನು ಹಾಗೆಯೇ ಕರೆಯುತ್ತಾರೆ. ನಾಣಿ ನಮ್ಮ ಊರಿಗೆ ಒಬ್ಬ ಬಾಲಾಚಾರ (Scout). ಯಾರಿಗೆ ಯಾವ ಕಾಲದಲ್ಲಾದರೂ ತನ್ನಿಂದಾಗಬಹುದಾದ ಸಹಾಯವನ್ನು ಮಾಡಲು ಸಿದ್ಧನಾಗಿರುತ್ತಾನೆ. ನಾಣಿಯು ನಮ್ಮ ಊರಿನ ಇತರರಂತೆ ಬಹಳ ವಿನೋದಪ್ರಿಯ. ರೈತರಿಗಂತೂ ಅವನನ್ನು ಕಂಡರೆ ಬಹಳ ವಿಶ್ವಾಸ. ಅವನನ್ನು 'ಸರ್ವಜ್ಞ ನಾಣಪ್ಪ' ಎನ್ನುತ್ತಾರೆ.

ನಾಣಿಯು ಯಾವಾಗಲೂ ಪಾದರಸದಂತೆ ಚಟುವಟಿಕೆಯಾದ ಮನುಷ್ಯ. ಅವನೆಲ್ಲಿದ್ದರೆ ಅಲ್ಲಿ ನಗು ಗದ್ದಲ. ಯಾವಾಗಲೂ ಇರುವುದರಲ್ಲಿ ತೃಪ್ತನಾಗಿರುವುದು ಅವನ ಸ್ವಭಾವ. ಸಮಯಕ್ಕೂ ಸ್ಥಳಕ್ಕೂ ತಕ್ಕಂತೆ ತನ್ನ ನಡತೆಯನ್ನೂ ಮಾತನ್ನೂ ಬದಲಾಯಿಸಿಕೊಂಡು ಎಲ್ಲರಿಗೂ ಸ್ನೇಹಿತನಾಗಿರುವ ಶಕ್ತಿಯೂ ಅವನಿಗೆ ಇದೆ. ನಮ್ಮ ಊರಿಗೆ ಅವನು ಸ್ಥಳ ಪುರಾಣವಿದ್ದಂತೆ. ಪ್ರತಿಯೊಬ್ಬರ ಮನೆಯ ವಿಷಯಗಳೂ ಅವನಿಗೆ ಗೊತ್ತು. ಎರಡು ಮೂರು ತಲೆಗಳಿಗೆ ಸಂಬಂಧಪಟ್ಟ ಕಥೆಗಳನ್ನೆಲ್ಲಾ ಅವನು ಹೇಳುತ್ತಾನೆ. ಇದರಿಂದ ಮುದುಕರಿಗೂ ಅವನಲ್ಲಿ ಗೌರವ. ಯಾವಾಗಲೂ ಯಾರಿಗಾದರೂ ಸಹಾಯ ಮಾಡಲು ಸಿದ್ಧನಾಗಿರುವುದರಿಂದ ಹೆಂಗಸರಿಗೆ ಅವನನ್ನು ಕಂಡರೆ ಗೌರವ ವಿಶ್ವಾಸಗಳಿವೆ. ಚಿಕ್ಕ ಹುಡುಗರಿಗಂತೂ ಇವನು ಗುರು. ಹುಡುಗರಿಗೆ ನಾಣಿಯಲ್ಲಿ ವಿಶ್ವಾಸವೂ, ಆನಂದವೂ ಉಂಟಾಗಲು ಕಾರಣವಿದೆ. ನಾಣಿಯು ಯಾವಾಗ ಮಾತನಾಡಬೇಕಾದರೂ ಅಂತ್ಯಪ್ರಾಸವಿಲ್ಲದೆ ಮಾತನಾಡುವುದೇ ಇಲ್ಲ. ಅವನಿಗೆ ಒಂದು ಪದವನ್ನು ಹೇಳಿದರೆ ಅದೇ ರೀತಿಯ ಮೂವತ್ತು ಪದಗಳನ್ನು ಹೇಳುತ್ತಾನೆ. ಹುಡುಗರು ಅದಕ್ಕೆ ನಗುತ್ತಾರೆ. ಹೀಗೆ ನಾಣಿಯು ನಮ್ಮ ಊರಿನ ಎಲ್ಲರಿಗೂ ಬೇಕಾದ ಮನುಷ್ಯ.

1. ನಾಣಿಯು ಊರಿಗೆ ಸ್ಥಳ ಪುರಾಣವಿದ್ದಂತೆ ಎನ್ನಲು ಕಾರಣ :
   (1) ಅವನು ಯಾರಿಗಾದರೂ ಸಹಾಯ ಮಾಡಲು ಸಿದ್ಧನಿರುವುದರಿಂದ
   (2) ಅವನು ಎರಡು ಮೂರು ತಲೆಗಳಿಗೆ ಸಂಬಂಧಪಟ್ಟ ಕಥೆಗಳನ್ನು ಹೇಳುವುದರಿಂದ
   (3) ಅವನು ಇರುವುದರಲ್ಲಿಯೇ ತೃಪ್ತನಾಗಿರುವುದರಿಂದ
   (4) ಅವನಿಗೆ ಎಲ್ಲರಿಗೂ ಸ್ನೇಹಿತನಾಗುವ ಶಕ್ತಿಯಿರುವುದರಿಂದ



Visit CollegeDekho

2. ಲೇಖಕರು ನಾಣಿಯನ್ನು ನಮ್ಮ ಊರಿಗೆ ಒಬ್ಬ ಬಾಲಾಚಾರ (Scout) ಎನ್ನುತ್ತಾರೆ. ಏಕೆಂದರೆ :
   (1) ಅವನು ಯಾರಿಗೆ ಯಾವ ಕಾಲದಲ್ಲಾದರೂ ಸಹಾಯ ಮಾಡುವುದರಿಂದ
   (2) ಅವನು ವಿನೋದ ಪ್ರಿಯನಾಗಿರುವುದರಿಂದ
   (3) ಅವನು ಪಾದರಸದಂತೆ ಚಟುವಟಿಕೆಯಿಂದ ಇರುವುದರಿಂದ
   (4) ಜೋಡಿದಾದರಿಗೆ ಸ್ನೇಹಿತನಾಗಿರುವುದರಿಂದ

3. 'ಸರ್ವಗ್ನ' ಪದದ ಶುದ್ಧ ರೂಪ :
   (1) ಸರ್ವಘ್ನ (2) ಸರ್ವಜ್ಞ (3) ಸರ್ವಜ್ಞಾ (4) ಸರ್ವಗ್ನ

4. ಹುಡುಗರಿಗೆ ನಾಣಿಯಲ್ಲಿ ವಿಶ್ವಾಸ ಆನಂದ ಉಂಟಾಗಲು ಕಾರಣ :
   (1) ನಾಣಿಯು ವಿನೋದ ಪ್ರಿಯನಾಗಿರುವುದರಿಂದ
   (2) ನಾಣಿಯು ಪಾದರಸದಂತೆ ಚಟುವಟಿಕೆಯಿಂದ ಇರುವುದರಿಂದ
   (3) ನಾಣಿಯು ಯಾವಾಗಲೂ ತೃಪ್ತನಾಗಿರುವುದರಿಂದ
   (4) ನಾಣಿಯು ಯಾವಾಗಲೂ ಅಂತ್ಯಪ್ರಾಸದಿಂದಲೇ ಮಾತನಾಡುವುದರಿಂದ

5. 'ಪಿತ್ರಾರ್ಜಿತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :
   (1) ವೃದ್ಧಿಸಂಧಿ (2) ಯಣ್‌ಸಂಧಿ (3) ಜಸ್ತ್ವಸಂಧಿ (4) ಗುಣಸಂಧಿ

6. ನಾಣಿಯನ್ನು ಮೊದಲು 'ನಾಣಿ' ಎಂದು ಕರೆದವರು :
   (1) ಹೆಂಗಸರು (2) ಮುಧುಕರು (3) ಹುಡುಗರು (4) ಜೋಡಿದಾರರು

7. ನಾಣಿಯು ಸಾಲಗಾರನಾಗದೆ ಮಿತವ್ಯಯದಿಂದ ಸುಖಿಯಾಗಿದ್ದಾನೆ. ಏಕೆಂದರೆ :
   (1) ನಾಣಿಗೆ ಪಿತ್ರಾರ್ಜಿತ ಆಸ್ತಿ ಇರುವುದರಿಂದ
   (2) ನಾಣಿಯು ಎರಡನೇ ಮದುವೆ ಆಗದಿರುವುದರಿಂದ
   (3) ನಾಣಿಯು ಅವಶ್ಯಕತೆಗಳು ಹೆಚ್ಚಾಗಿಲ್ಲವಾದ್ದರಿಂದ
   (4) ನಾಣಿಯು ವಿನೋದರಪ್ರಿಯನಾಗಿರುವುದರಿಂದ

8. ರೈತರು ನಾಣಿಯನ್ನು ಹೀಗೆ ಕರೆಯುತ್ತಿದ್ದರು :
   (1) ನಾರಾಯಣಯ್ಯಂಗಾರ್ (2) ಸರ್ವಗ್ನ ನಾಣಪ್ಪ
   (3) ವಿನೋದಪ್ರಿಯ (4) ಬಾಲಾಚಾರ



Visit CollegeDekho

ಸೂಚನೆ : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು 9 ರಿಂದ 15 ಪ್ರಶ್ನೆಗಳಿಗೆ ಉತ್ತರಿಸಿರಿ.

ಮೊನ್ನೆ ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳಿತೊಂದು ಪುಟ್ಟ ಮಗುವು ಅಜ್ಜನ
"ಈತನಾರು ತಾತ ಇಲ್ಲಿ ನಿಂತು ನೋಡುತಿರುವನು
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತ್ತಿರುವನು?"
"ಇವನೆ ಬಾಹುಬಲಿಯು ಮಗು ! ಧೀರತನದ ಮೂರ್ತಿಯು
ನುಡಿಯ ಹೊಳೆಗಳಲ್ಲಿ ತುಂಬಿ ಹರಿವುದಿವನ ಕೀರ್ತಿಯು
ಹತ್ತುವವರ ಇಳಿಯುವವರ ನಿಂತು ನೋಡುತಿರುವನು
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು.
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು"
"ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ ! ಎತ್ತರ !
ಭಯವಾಗದೆ ಇವನಿಗಿಲ್ಲಿ ಯಾರು ಇಲ್ಲ ಹತ್ತಿರ"
"ಇವನಿಗೆಲ್ಲಿ ಭಯವು ಮಗು ಅಭಯಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ ಒಮ್ಮೆ ಆತನು
ಹಮ್ಮಿನಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು.
ಗೆದ್ದ ರಾಜ್ಯ ಮರಳಿಸುತ್ತ ನುಡಿದನೊಂದು ಮಾತನು
ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೆನು
ಬೆಟ್ಟ ಕರೆಯುತಿಹುದು ನನ್ನ ಮುಗಿಲು ತನ್ನ ಹತ್ತಿರ
ಯಾವುದುಂಟು ಅಣ್ಣ ಇಲ್ಲಿ ಜೀವವೇರದೆತ್ತರ?
ತಪಸ್ಸೊಂದೆ ತಿಳಿವುದೊಂದೆ ಹುಟ್ಟು ಸಾವಿನುತ್ತರ
ನಿಂತು ಹಾಗೆ ನಿಂತುಕೊಂಡು ಘೋರ ತಪವ ಮಾಡಲು
ಹುಟ್ಟು ಸಾವಿನಾಚೆಗಿರುವ ಹೊಳೆವ ಹಾದಿ ನೋಡಲು
ಬಿಸಿಲು ಬಂತು ನೆರಳು ಬಂತು ಗಾಳಿ ಬಿಚ್ಚಿ ಬೀಸಿತು

ಒಮ್ಮೆ ಹಸಿರು ಒಮ್ಮೆ ಹೊನ್ನು ಹಚ್ಚಡವನು ಹಾಸಿತು
ಸೂರ್ಯನೊಮ್ಮೆ ಚಂದ್ರನೊಮ್ಮೆ ಸುತ್ತು ಹಾಕಿ ನಡೆದರು
ದೀಪದಂತೆ ನಿಂತ ಇವಗೆ "ನಮೋ" ಎಂದು ನುಡಿದರು
"ಇಷ್ಟು ಜನರು ಇಲ್ಲಿಗಿಂದು ಏಕೆ ಬಂದು ನೆರೆದರು?
'ಬಾಹುಬಲಿ' 'ಬಾಹುಬಲಿ' ಎಂದು ಕರೆಯುತಿರುವರು"?
"ಮಗೂ ಇಂದು ಇವನಿಗಿಲ್ಲಿ ಹಾಲಿನಲ್ಲಿ ಸ್ನಾನವು
ದಾರಿಯಲ್ಲಿ ದಣಿದ ಇವರಿಗೆ, ಇವನದೊಂದೆ ಧ್ಯಾನವು
ಮುದ್ದು ಮುಖದಿ ಮುಗುಳ್ನಕ್ಕು ಸಿದ್ಧನಾಗಿ ನಿಂತಿಹ
ದುಗ್ಧಹಾಸದಲ್ಲಿ ನಲಿವ ಮುಗ್ಧ ಮಗುವಿನಂತಿಹ"
"ತಾತ,
ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು ಬಾಹುಬಲಿಯ ಕೂಡ ತನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ"
ಗೊಮ್ಮಟೇಶ ನಕ್ಕು ಬಿಟ್ಟ ಕಂಡು ಮುಗ್ಧ ನಂಬಿಗೆ.



Visit CollegeDekho

9. ಹಮ್ಮಿನಲ್ಲಿ ಬಂದು ತಮ್ಮನಲ್ಲಿ ಸೋತವನು :

(1) ಬಾಹುಬಲಿ (2) ತಾತ

(3) ಭರತ ಚಕ್ರವರ್ತಿ (4) ಮಗು

10. ಹುಟ್ಟು ಸಾವಿನ ಉತ್ತರವನ್ನು ತಿಳಿಯಲು ಇರುವ ಮಾರ್ಗ :

(1) ಯುದ್ಧ (2) ತಪಸ್ಸು

(3) ಪ್ರಾರ್ಥನೆ (4) ತೀರ್ಥಯಾತ್ರೆ

11. ಬಾಹುಬಲಿಯು ನಿಂತಿರುವ ಬೆಟ್ಟದ ಹೆಸರು :

(1) ಚಂದ್ರಗಿರಿ (2) ಕನಕಗಿರಿ

(3) ರಜತಗಿರಿ (4) ಇಂದ್ರಗಿರಿ

12. ಗೊಮ್ಮಟೇಶನು ನಗಲು ಕಾರಣ :

(1) ಮಜ್ಜನ (2) ಮಗುವಿನ ಮುಗ್ಧ ನಂಬಿಕೆ

(3) ಜನರ ಉದ್ಘೋಷ (4) ಗೆದ್ದ ರಾಜ್ಯ ಮರಳಿಸಿದ್ದಕ್ಕೆ

13. ಈ ಪದ್ಯದ ಪ್ರಕಾರ ಹಾಲಿನ ಮಜ್ಜನ ಇವರಿಗೆ ನಡೆಯುತ್ತಿದೆ :

(1) ಭರತ ಚಕ್ರವರ್ತಿಗೆ (2) ತಾತನಿಗೆ

(3) ಬಾಹುಬಲಿಗೆ (4) ಮಗುವಿಗೆ

14. 'ಮೊನ್ನೆ ಮೊನ್ನೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ :

(1) ದ್ವಿರುಕ್ತಿ (2) ಜೋಡಿಪದ

(3) ನುಡಿಗಟ್ಟು (4) ಅನುಕರಣಾವ್ಯಯ

15. 'ಹಚ್ಚಡ' ಪದದ ಅರ್ಥ :

(1) ಹರಡು (2) ಹೊದಿಕೆ (3) ಹಸುರಿನ ತಟ (4) ಹರಸು

16. ಭಾಷೆಯು ಮೂಲಭೂತವಾಗಿ ಮೌಖಿಕ ಕ್ರಿಯೆ ನಂತರ ಪಡೆಯುವ ರೂಪ :

(1) ಜೈವಿಕ (2) ಬರಹ

(3) ಸಾಮಾಜಿಕ (4) ಅನುವಂಶಿಕ



Visit CollegeDekho

**17.** ಭಾಷೆಯ ಉಗಮದ ಬಗ್ಗೆ ಇರುವ ದೈವ ಮೂಲ ಸಿದ್ಧಾಂತದ ಪ್ರಕಾರ ಭಾಷೆ ಹೀಗೆ ಉದ್ಭವವಾಗಿದೆ :

(1) ಭಾಷೆ ಅನುಕರಣೆಯಿಂದ ಬಂದಿದೆ (2) ಭಾಷೆ ಸೃಷ್ಟಿಕರ್ತನಿಂದ ಬಂದಿದೆ

(3) ಭಾಷೆ ಉದ್ಗಾರಗಳಿಂದ ಉಗಮವಾಗಿದೆ (4) ಭಾಷೆ ಸಂಜ್ಞೆಗಳಿಂದ ಬಂದಿದೆ

**18.** ಕನ್ನಡದ ಲೇಖಕಿಯರಿಗೆ ನೀಡಲಾಗುವ ಪ್ರಶಸ್ತಿ ಇದು :

(1) ಜಕಣಾಚಾರಿ ಪ್ರಶಸ್ತಿ (2) ಶಾಂತಲಾ ಪ್ರಶಸ್ತಿ

(3) ಗುಬ್ಬಿ ವೀರಣ್ಣ ಪ್ರಶಸ್ತಿ (4) ಅತ್ತಿಮಬ್ಬೆ ಪ್ರಶಸ್ತಿ

**19.** ಇದು ಪ್ರಬಂಧ ಬೋಧನೆಯ ಉದ್ದೇಶಗಳಲ್ಲಿ ಒಂದಾಗಿದೆ :

(1) ಶುದ್ಧ ಭಾಷಾ ಪ್ರಯೋಗವನ್ನು ಅಭ್ಯಾಸ ಮಾಡಿಸುವುದು

(2) ನಿರರ್ಗಳ ಮಾತುಗಾರಿಕೆ ಅಭಿವ್ಯಕ್ತಿ ಪಡಿಸುವುದು

(3) ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು

(4) ಹಾವಭಾವ ಅಭಿನಯ ಕೌಶಲ್ಯವನ್ನು ಬೆಳೆಸುವುದು

**20.** ಈ ಕೆಳಗಿನವುಗಳಲ್ಲಿ ಭಾಯೋದಿನ ಕುರಿತು ಸಂಬಂಧ ಪಡದೇ ಇರುವ ಹೇಳಿಕೆ ಇದಾಗಿದೆ :

(1) ಇದು ಮೌಖಿಕ ಕ್ರಿಯೆಯಾಗಿದೆ

(2) ಧ್ವನ್ಯಂಗಗಳು ಕೆಲಸ ಮಾಡುತ್ತವೆ

(3) ಉಚ್ಚಾರದ ತಪ್ಪುಗಳನ್ನು ಗುರುತಿಸಬಹುದಾಗಿದೆ

(4) ಕಡಿಮೆ ಕಾಲದಲ್ಲಿ ಹೆಚ್ಚು ವಿಷಯಗಳನ್ನು ಓದಬಹುದಾಗಿದೆ

**21.** ಭಾಷೆಯ ಸುಸಂಬದ್ಧ ರಚನೆ, ಅರ್ಥಬದ್ಧತೆ ಮತ್ತು ನಿರರ್ಗಳ ಅಭಿವ್ಯಕ್ತಿಗಾಗಿ ಅಧ್ಯಯನ ಮಾಡುವ ಕ್ರಮ :

(1) ವ್ಯಾಕರಣ (2) ಗದ್ಯ ಬೋಧನೆ (3) ಪದ್ಯ ಬೋಧನೆ (4) ಧ್ವನಿಶಾಸ್ತ್ರ

**22.** ವಿದ್ಯಾರ್ಥಿಗಳಲ್ಲಿ ಜ್ಞಾನ, ವರ್ತನೆ, ಕೌಶಲ್ಯ ಮತ್ತು ಮನೋಭಾವಗಳಲ್ಲಿನ ಬದಲಾವಣೆಗಳನ್ನು ಗುರ್ತಿಸುವ ನಿರಂತರ, ವ್ಯಾಪಕ ಮತ್ತು ನಿರ್ದಿಷ್ಟ ಪ್ರಕ್ರಿಯೆ :

(1) ಪರೀಕ್ಷೆಗಳು (2) ಪ್ರಯೋಗಗಳು (3) ಮೌಲ್ಯಮಾಪನ (4) ಕ್ರಿಯಾಸಂಶೋಧನೆ

**23.** ಒಂದು ಮುದ್ರಿತ ಲಿಪಿಯನ್ನು ನೋಡಿ ಗಮನಿಸಿ ಅರ್ಥ ಮಾಡಿಕೊಂಡು ಧ್ವನಿರೂಪದಲ್ಲಿ ಅರ್ಥಬದ್ಧವಾಗಿ ಹೊರಹೊಮ್ಮಿಸುವ ಕ್ರಿಯೆ :

(1) ಮಾತುಗಾರಿಕೆ (2) ಬರವಣಿಗೆ (3) ಓದುಗಾರಿಕೆ (4) ಜ್ಞಾನಾರ್ಜನೆ



Visit CollegeDekho

24. ಕಾಲ, ದೇಶ, ಸಂಸ್ಕೃತಿಗಳನ್ನು ಆಧರಿಸಿ ಮೂಲ ಕೃತಿಯನ್ನು ಬೇರೊಂದು ಭಾಷೆಗೆ ಅಳವಡಿಸುವಾಗ ಆ ಭಾಷೆಯ ಸಂಸ್ಕೃತಿಗೆ ಅನುಗುಣವಾಗಿ ರಚಿಸುವುದು :

(1) ಅನುವಾದ (2) ರೂಪಾಂತರ
(3) ಭಾಷಾಂತರ (4) ಯಥಾಪ್ರತಿ

25. ಉತ್ತಮ ಮತ್ತು ಸುಂದರ ಕೈ ಬರಹದ ಕೌಶಲ್ಯ ಗಳಿಸಿ ಮಾನ್ಯತೆ ಪಡೆಯುವುದು ಈ ಅಂಶದಿಂದ :

(1) ವೇಗವಾಗಿ ಬರೆಯುವುದರಿಂದ
(2) ನೇರವಾಗಿ ಬರೆಯುವುದರಿಂದ
(3) ಬರವಣಿಗೆ ವಿನ್ಯಾಸದ ಸತತ ಅಭ್ಯಾಸದಿಂದ
(4) ಕಾಗುಣಿತ ಲೇಖನ ಚಿಹ್ನೆ ಬಳಸುವುದರಿಂದ

26. ಕವಿಯೊಬ್ಬನ ಕನಸು, ಕಲ್ಪನೆ, ಭಾವಾನುಭವಗಳು ಭಾಷೆಯಲ್ಲಿ ಸುಸಂಬದ್ಧವಾಗಿ ಮತ್ತು ಛಂದೋಬದ್ಧವಾಗಿ ಅಭಿವ್ಯಕ್ತಗೊಳ್ಳುವ ರಚನೆ ಇದು :

(1) ಗದ್ಯ ಸಾಹಿತ್ಯ (2) ಪದ್ಯ ಸಾಹಿತ್ಯ
(3) ನಾಟಕ ಸಾಹಿತ್ಯ (4) ಸೃಜನಶೀಲತೆ

27. ಆಡುವ ಮಾತು, ನಡೆಯುತ್ತಿರುವ ಕೆಲಸ, ಮಾಡುವ ಉದ್ದೇಶ ಈ ಭಾಷೆಯಲ್ಲಿ ನಡೆದಾಗ ಜನತೆಯ ಜೀವನದ ಮೇಲೆ ಸೂಕ್ತ ಪ್ರಭಾವ ಬೀರಲು ಸಾಧ್ಯವಾಗುವುದು :

(1) ವಿದೇಶಿ ಭಾಷೆ (2) ಪ್ರಾಂತ್ಯ ಭಾಷೆ (3) ಅನ್ಯ ಭಾಷೆ (4) ಅಂತರರಾಷ್ಟ್ರೀಯ ಭಾಷೆ

28. ಗುರು ಲಘು ನಡುವಿರೆ :

(1) ಮನಗಣ (2) ಭಯಗಣ (3) ಜರಗಣ (4) ಸತಗಣ

29. 'ಮರವನೇರಿದ ಮರ್ಕಟನಂತೆ' ಈ ವಾಕ್ಯದಲ್ಲಿರುವ ಅಲಂಕಾರ :

(1) ಉಪಮಾಲಂಕಾರ (2) ರೂಪಕಾಲಂಕಾರ (3) ಶಬ್ದಾಲಂಕಾರ (4) ಶ್ಲೇಷಾಲಂಕಾರ

30. ಆರು ಸಾಲುಗಳ ಪದ್ಯವನ್ನು ಹೀಗೆಂದು ಕರೆಯುವರು :

(1) ತ್ರಿಪದಿ (2) ಚೌಪದಿ (3) ಷಟ್ಪದಿ (4) ಅಷ್ಟಪದಿ



Visit CollegeDekho

# PART – I

## Language – I

## ENGLISH

**Directions: (Questions 1 to 5) Read the given passage and answer the questions that follow by selecting the most appropriate option.**

*Trains, Then and Now*

When I' was young, a railway journey was an exciting adventure. I had to get up early and have a bath; my mother would not let me go anywhere without one! 'You must get to the station at seven,' she said, if the train was only due at eight. I had to push my way into a carriage in two minutes flat. The crowds were terrible; there was only one train in the morning to Madras. But I had one advantage, I was small enough to climb over people and slither into the carriage over the human mass. There were of course no arrangements for sleeping. We had to sleep on the floor, on trunks and suitcases, on luggage racks, or on other passengers.

The adventure and romance have gone out of train travel. Have you got anything to do now except queue like sheep before a window, pay out your money and get a ticket? Your place is reserved, there is a conductor who has to see that everyone of us is in his seat or stretched out on his berth by ten o'clock. The lights have to be switched off at ten and there is no anxiety, no discomfort, no struggle, no fighting, no quarrels. The whole thing is as dull as ditchwater. Yet we must travel, even the more adventurous of us, and we must resign ourselves to the loss of all colour and gaiety on the Indian railways.

1. The train journey of twenty or thirty years ago was a thing of adventure when people
   (1) paid money before a window to get a ticket
   (2) stretched out on their berth
   (3) slept on the floor, on trunks and suitcases, on luggage racks or on other passengers
   (4) switched off the lights at ten

2. Find a word from the passage meaning 'an arrangement for sleeping in a train'
   (1) carriage
   (2) berth
   (3) floor
   (4) racks



Visit CollegeDekho

3. The adjective form of 'adventure'
   (1) adventurer (2) adventuring
   (3) adventurement (4) adventurous

4. 'I had to get up early and have a bath'. The infinitive in the above sentence is
   (1) had (2) to get up (3) have (4) early

5. The meaning of 'slither' is
   (1) move fast (2) move smoothly (3) jump (4) climb

**Read the given Poem and answer the questions (Q. No 6 to 10) that follow by selecting the most appropriate option. :**

**The Quarrel**

*I quarrelled with my brother*
*I don't know what about,*
*One thing led to another*
*And somehow we fell out.*
*The start of it was slight,*
*The end of it was strong,*
*He said he was right,*
*I knew he was wrong!*

*We hated one another.*
*The afternoon turned black.*
*Then suddenly my brother*
*Thumped me on the back,*
*And said, "Oh, come along!*
*We can't go on all night –*
*I was in the wrong."*
*So he was in the right.*

– <u>ELEANOR FARJEON</u>

6. The poet talks about
   (1) the quarrel between siblings (2) the quarrel between parents
   (3) the quarrel between neighbours (4) the quarrel between friends

7. The correct pair of phrases which are found in the poem are
   (1) was right, was wrong (2) fell out, turned black
   (3) we hated, turned black (4) fell out, and some how



Visit CollegeDekho

8. Identify the lines that indicates the beginning and end of the quarrel

(1) I quarrelled with my brother
I don't know what about

(2) He said he was right
I knew he was wrong

(3) The start was slight
the end of it was strong

(4) We hated one another
the afternoon turned black


9. Brother: another :: slight :
The correct word to be used in the blank to complete the analogy is

(1) might (2) suit (3) fit (4) shoot

10. The poem ends with the two who quarrelled ____________

(1) reconciling
(2) becoming enemies
(3) feeling jealous
(4) being scolded

**Directions: (Questions 11 to 15) Look at the given road map and answer the questions that follow by selecting the most appropriate option.**




11. Ritu's house is on the

(1) Link Road
(2) School Road
(3) Mahatma Gandhi Road
(4) Tilak Marg



Visit CollegeDekho

12. Ritu is in the stadium. She wants to go to the Metro Cinema
(1) Ritu passes by the school road after leaving the stadium
(2) She turns left on the link road and then right to reach Tilak Marg
(3) She turns left and left again at Mahatma Gandhi Road
(4) She turns left and then right again, crosses the public library and goes straight down Mahatma Gandhi Road

13. The main road is
(1) Tilak Marg (2) Link Road
(3) School Road (4) Mahatma Gandhi Road

14. Identify the correct statement
(1) The stadium is on Tilak Marg
(2) To see a film at the metro Cinema, Ritu has to keep going on the Mahatma Gandhi Road till its end
(3) On Ritu's way to the metro Cinema, she can return her book at the library
(4) The Metro Cinema is opposite to Ritu's house

15. To reach the modern school, Ritu has to
(1) take the link road
(2) turn left to join school road
(3) turn right to join Mahatma Gandhi Road
(4) pass by the Public Library

16. Language acquisition occurs only when,
(1) the child is taught the rules of grammar
(2) the child is given an award
(3) the child has exposure to the language
(4) the child is given lot of reading and writing practise

17. The body language which shows that you are listening is
(1) Turning away from the speaker (2) Nodding and making eye contact
(3) Looking out of the window (4) Looking unconcerned

18. One of the activities which allows Reading aloud is
(1) a favourite novel of yours at bed time (2) SMS
(3) news papers in school assembly (4) a personal letter

19. The term used at the end of an official letter is
(1) Salutation (2) Superscription (3) Subject (4) The subscription

20. Scanning and Skimming are strategies for
(1) Speaking (2) Listening (3) Reading (4) Writing

21. A student learns a poem by reciting it several times. He is
(1) an auditory learner (2) a visual learner
(3) a kinaesthetic learner (4) a tactile learner



Visit CollegeDekho

22. The number of syllables in the word 'ache' is
(1) One (2) Two (3) Three (4) Four

23. The activity which helps a slow learner to improve himself
(1) give more books to read
(2) give special coaching and proper individual attention
(3) give all the stationery he needs
(4) give more homework

24. Identify a receptive skill
(1) Listening (2) Speaking (3) Reference (4) Writing

25. The teacher feels that some of her learners are making good progress and find the exercise too easy. So she will use an appropriate strategy for adapting materials by
(1) shortening the material (2) reordering the material
(3) changing the level of the material (4) changing the form of the task

26. When the teacher comments, "That was very well explained, well done". She is giving a feedback on
(1) behaviour (2) progress (3) interaction (4) language

27. In the new system the structural situational method of learning English, the unit of language is the
(1) Sentence (2) Word (3) Letter (4) Syllable

28. The use of two languages in the classroom can be done in such a way as to provide comprehensible input in the target language using the first/ native language to provide background information. This is
(1) Grammar- translation method (2) Direct method
(3) Multilingualism (4) Communicative approach

29. 'Open your books now'
Disyllabic word in the above sentence is
(1) open (2) your (3) books (4) now

30. Read a teacher's statement below and choose the most appropriate solution.
Teacher : I need a way of helping my young 5 year old learners develop their vocabulary
(1) use a picture dictionary (2) use an advanced learner dictionary
(3) use a pronunciation dictionary (4) use a dictionary of collocations



Visit CollegeDekho

# PART – II

## ಭಾಷೆ – II

## ಕನ್ನಡ

ಸೂಚನೆ : ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (31 ರಿಂದ 38) ಪ್ರಶ್ನೆಗಳಿಗೆ ಉತ್ತರಿಸಿರಿ.

ಒಂದು ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣ ಇದ್ದನು. ಆ ಬ್ರಾಹ್ಮಣನ ಮಗನು ಒಂದು ದಿವಸ ತನ್ನ ತಂದೆಯ ಬಳಿಗೆ ಹೋಗಿ "ಅಪ್ಪಾ, ಪಕ್ಷಿಗಳಿಗೆ ರೆಕ್ಕೆಗಳು ಇರುವುದರಿಂದ ಅವುಗಳು ಬೇಕಾದ ಸ್ಥಳಗಳಿಗೆ ಬಹು ತ್ವರೆಯಾಗಿ ಹೋಗುತ್ತವೆ. ದನಗಳಿಗೆ ಕೊಂಬುಗಳು ಇರುವುದರಿಂದ ತಮ್ಮ ಶತ್ರುಗಳನ್ನು ಹಾದು ಕೊಲ್ಲುತ್ತವೆ ; ಹಂದಿಗಳು ಕೋರೆಗಳಿಂದ ಹೊಡೆಯುತ್ತವೆ, ಕೆಲವು ಪ್ರಾಣಿಗಳಿಗೆ ಬಾಲವಿರುವುದರಿಂದ ಅಲಂಕಾರವಾಗಿ ಇರುತ್ತದೆ. ನನಗೂ ರೆಕ್ಕೆಗಳೂ, ಕೊಂಬುಗಳೂ, ಕೋರೆಗಳೂ, ಬಾಲವೂ ಇದ್ದರೆ, ಚೆನ್ನಾಗಿ ಇರುತ್ತಿತ್ತು ; ಈಗ ನಾನು ದೇವರನ್ನ ಪ್ರಾರ್ಥನೆ ಮಾಡಿ, ಇವುಗಳನೆಲ್ಲಾ ಪಡಕೊಳ್ಳುತ್ತೇನೆ", ಎಂದು ಹೇಳಲಾಗಿ; ಎಲಾ, ದೇವರು ಈ ಪ್ರಪಂಚವನ್ನು ಸೃಷ್ಟಿ ಮಾಡಿದಾಗ ಯಾವ ಯಾವ ಪ್ರಾಣಿಗೆ ಏನು ಏನು ಅವಶ್ಯವಾಗಿ ಇರಬೇಕೋ, ಅವುಗಳನ್ನೆಲ್ಲಾ ಕೊಟ್ಟಿದ್ದಾನೆ, ನಿನಗೆ ಏನು ಕಡಿಮೆ ಮಾಡಲಿಲ್ಲ ; ನಿನಗೆ ದೇವರು ಕೊಟ್ಟಿರುವುದನ್ನೆಲ್ಲಾ ನೋಡು ; ತಲೆ, ಕಿವಿ, ಮೋರೆ ಹಣೆ, ಹುಬ್ಬು, ಕಣ್ಣು ರೆಪ್ಪೆ, ಕಣ್ಣುಗುಡ್ಡೆ, ಗುಡ್ಡು ಮೂಗು, ಹೊಳ್ಳೆ ತುಟಿ, ಗಲ್ಲ, ಗದ್ದ, ಕೆನ್ನೆ, ಬಾಯಿ, ಹಲ್ಲು, ನಾಲಗೆ, ವಸಡು, ಕೊರಳು, ಗಂಟಲು, ಕುತ್ತಿಗೆ, ಬೆನ್ನು, ಬೆನ್ನೆಲುಬು, ಎದೆ, ಕೈ, ಹೆಗಲು, ತೋಳು, ರಟ್ಟೆ, ಮುಂಗೈ, ಅಂಗೈ ಮಣಿಕಟ್ಟು, ಬೆರಳು, ಉಗುರು, ಹೊಟ್ಟೆ, ಪಕ್ಕೆ, ಹೊಕ್ಕುಳು, ತೊಡೆ, ಕಾಲು, ನಡುವು, ಅಂಗಾಲು ಮುಂತಾದ ಅವಯವಗಳನ್ನು ನಿನಗೆ ದೇವರು ಕೊಟ್ಟಿದ್ದಾನೆ. ತಲೆಯಲ್ಲಿ ಕೂದಲು ಇರುವುದರಿಂದ ಅಲಂಕಾರವಾಗಿ ಇರುತ್ತದೆ, ಇವುಗಳಲ್ಲಿ ಒಂದು ಇಲ್ಲದೇ ಇದ್ದರೂ ಬಹಳ ಕಷ್ಟವಾಗಿ ಇರುತ್ತದೆ, ಈ ಪ್ರಪಂಚದಲ್ಲಿ ಎಷ್ಟು ಮಂದಿ ಕುರುಡರು, ಕಿವುಡರು, ಕುಂಟರು, ಮುಕಾರಿಗಳು, ಸೋಟೆಹರಕರು, ಮೂಕರು, ರೊಡ್ಡರು, ಮೆರಳುಗಣ್ಣರು, ತೊದಲರು ಇರುತ್ತಾರೆ, ನೋಡು ! ಇಂಥಾ ಕುಂದುಗಳು ನಿನಗೇನೂ ಇಲ್ಲ ! ಇದಲ್ಲದೆ ದೇವರು ನಿನಗೆ ಬುದ್ಧಿ, ಜ್ಞಾನ, ವಿವೇಕ ನೆನಮು ಮುಂತಾದ್ದು ಕೊಟ್ಟಿದ್ದಾನೆ. ಇವುಗಳಿಂದ ಉಳಿದ ಪ್ರಾಣಿಗಳನ್ನೆಲ್ಲಾ ನಿನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದಕ್ಕೂ, ದೇವರ ಗುಣಗಳನ್ನು ತಿಳಿದು ಆತನ ಸ್ತೋತ್ರ ಮಾಡುವುದಕ್ಕೂ ನಿನಗೆ ಶಕ್ತಿ ಇರುತ್ತದೆ. ಇಂಥಾ ಶಕ್ತಿ ಉಳಿದ ಪ್ರಾಣಿಗಳಿಗೆ ಇಲ್ಲ. ಆದ ಕಾರಣ ನಿನಗೆ ದೇವರು ಕೊಟ್ಟದ್ದಕ್ಕೆ ಸಂತುಷ್ಟನಾಗಿ, ಇವುಗಳಲ್ಲಿ ಯಾವುದಕ್ಕೂ ಕಡಿಮೆ ಬಾರದೆ ಇರಬೇಕೆಂಬುದಾಗಿ ದೇವರನ್ನು ಪ್ರಾರ್ಥನೆ ಮಾಡಬೇಕೇ ಹೊರತು ಹೆರರಿಗೆ ಇರುವುದು ನಿನಗೆ ಬೇಕೆಂಬುದಾಗಿ ಬಯಸ ಬಾರದೆಂದು, ತಂದೆ ಹೇಳಿದನು.

**31.** ಪಕ್ಷಿಗಳು ತಮಗೆ ಬೇಕಾದ ಸ್ಥಳಕ್ಕೆ ತ್ವರಿತವಾಗಿ ಹೋಗಲು ಇವುಗಳನ್ನು ಬಳಸುತ್ತವೆ.

(1) ಬಾಲಗಳು
(2) ಕೊಂಬುಗಳು
(3) ಕೋರೆಹಲ್ಲುಗಳು
(4) ರೆಕ್ಕೆಗಳು

**32.** ಬ್ರಾಹ್ಮಣನ ಮಗನು ದೇವರನ್ನು ಕುರಿತು ಪ್ರಾರ್ಥನೆ ಮಾಡಿ ಇವುಗಳನ್ನು ಪಡೆಯುವುದಾಗಿ ತನ್ನ ತಂದೆಗೆ ಹೇಳುವನು.

(1) ದನದ ಕೊಂಬು
(2) ಹಂದಿಯ ಕೋರೆಹಲ್ಲು
(3) ರೆಕ್ಕೆ, ಕೊಂಬು, ಕೋರೆ, ಬಾಲ
(4) ಪ್ರಾಣಿಗಳ ಬಾಲ



Visit CollegeDekho

**33.** ಮನುಷ್ಯನಿಗೆ ದೇವರು ನೀಡಿರುವ ವಿಶೇಷ ಅಂಶ :

(1) ಮೆಳ್ಳಗಣ್ಣು
(2) ಬುದ್ಧಿ, ಜ್ಞಾನ, ವಿವೇಕ, ನೆನಪು
(3) ತಲೆಗೂದಲು
(4) ಹೃದಯ

**34.** ದೇವರು ಮನುಷ್ಯನಿಗೆ ಬುದ್ಧಿ, ಜ್ಞಾನ, ವಿವೇಕ, ನೆನಪಿನ ಶಕ್ತಿ ನೀಡಿರುವುದು :

(1) ಪ್ರಾಣಿಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಲು
(2) ಅಲಂಕಾರಕ್ಕಾಗಿ
(3) ಸ್ವಾರ್ಥಕ್ಕಾಗಿ
(4) ದ್ವೇಷಕ್ಕಾಗಿ

**35.** ಬ್ರಾಹ್ಮಣನು ಮಗನಿಗೆ ಹೇಳಿದ ಬುದ್ಧಿಮಾತು :

(1) ದೇವರು ಕೊಟ್ಟಿದ್ದಕ್ಕೆ ದುಃಖಪಡು
(2) ದೇವರು ಕೊಡಲಿಲ್ಲವೆಂದು ಕೋಪಗೊಳ್ಳು
(3) ದೇವರು ಕೊಟ್ಟಿದ್ದಕ್ಕೆ ಸಂತುಷ್ಟನಾಗು
(4) ದೇವರು ಕೊಡಲಿಲ್ಲವೆಂದು ಅಳಬೇಡ

**36.** ದೇವರು ಮನುಷ್ಯನಿಗೆ ತಲೆಯು ಅಲಂಕಾರಿಕವಾಗಿ ಕಾಣಲು ನೀಡಿರುವುದು :

(1) ಕಣ್ಣು (2) ಮೆದುಳು (3) ಹಣೆ (4) ಕೂದಲು

**37.** ಮುಂಗೈ ಈ ಸಮಾಸಕ್ಕೆ ಉದಾಹರಣೆಯಾಗಿದೆ :

(1) ತತ್ಪುರುಷ (2) ದ್ವಿಗು (3) ಅಂಶಿ (4) ದ್ವಂದ್ವ

**38.** 'ಸೋಟಿಹರಕ' ಪದವು ಈ ನಾಮಪದ

(1) ರೂಢನಾಮ
(2) ಅನ್ವರ್ಥನಾಮ
(3) ಅಂಕಿತನಾಮ
(4) ಭಾವನಾಮ

**ಸೂಚನೆ : ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (39 ರಿಂದ 45) ಪ್ರಶ್ನೆಗಳಿಗೆ ಉತ್ತರಿಸಿ.**

ಯೆಂಡ ಯೆಡ್ತಿ ಕನ್ನಡ್ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ !
ಬುಂಡೇನ್ ಎತ್ತಿ ಕುಡುದ್ಬುಟ್ಟಾಂದ್ರೆ
ತಕ್ಕೊ ! ಪದಗೊಳ್ ಬಾಣ !

ಬಗವಂತ್ ಏನ್ರ ಬೂಮಿಗ್ ಇಳಿದು
ನನ್ ತಾಕ್ ಬಂದಾಂತ್ ಅನ್ನು ;
ಪರ್‌ಗಿರೀಕ್ಸೆ ಮಾಡ್ತಾನ್ ಔನು –
ಬಕ್ತನ್ ಮೇಲ್ ಔನ್ ಕಣ್ಣು !



Visit CollegeDekho

'ಯಂಡ ಕುಡಿಯಾದ್ ಬುಟ್‌ಬುಡ್ ರತ್ನ !'
ಅಂತ್ ಔನ್ ಏನಾರ್ ಅಂದ್ರೆ –
ಮೂಂಗ್ ಮೂರ್ ಚೂರಾಗ್ ಮುರುಸ್ಕೊಂತೀನಿ
ದೇವರ್ ಮಾತ್ಗ ಅಡ್ಬಂದ್ರೆ !
'ಯಂಡ ಬುಟ್ಟೆ, ಯೆಡ್ತೀನ್ ಬುಟ್‌ಬುಡ್ !'
ಅಂತ್ ಔನ್ ಏನಾರ್ ಅಂದ್ರೆ –
ಕಳದೋಯ್ತ್ ಅಂತ ಕುಣದಾಡ್ತೀನಿ
ದೊಡ್ಡ್ ಒಂದ್ ಕಾಟ ! ತೊಂದ್ರೆ !
'ಕನ್ನಡ್ ಪದಗೋಳ್ ಆಡೋದ್ನೆಲ್ಲ
ನಿಲ್ಲೀಸ್ ಬುಡಬೇಕ್ ರತ್ನ' ।
ಅಂತ ಔನ್ ಅಂದ್ರೆ – ದೇವ್ರ್ ಆದ್ರ್ ಏನು !
ಮಾಡ್ತೀನ್ ಔನ್ನ ಖತ್ನ !
ಆಗ್ನೆ ಮಾಡೋ ಐಗೋಳ್ ಎಲ್ಲಾ
ದೇವ್ರೇ ಆಗ್ಲಿ – ಎಲ್ಲ !
ಕನ್ನಡ್ ಸುದ್ದೀಗ್ ಏನ್ನ ಬಂದ್ರೆ
ಮಾನ ಉಳಿಸಾಕಿಲ್ಲ !
ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ –
ಮೂಗ್ನಲ್ ಕನ್ನಡ್ ಪದವಾಡ್ತೀನಿ ।
ನನ್ ಮನಸನ್ ನೀ ಕಾಣೆ !
ಯೆಂಡ ವೋಗ್ಲಿ ! ಯೆಡ್ತಿ ವೋಗ್ಲಿ !
ಎಲ್ಲಾ ಕೊಚ್ಕೊಂಡ್ ವೋಗ್ಲಿ !
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ !

**39.** ರತ್ನನಿಗೆ 'ಪದಗಳ ಬಾಣ' ಬರುವುದು :

(1) ಭಗವಂತ ಭೂಮಿಗೆ ಬಂದಾಗ
(2) ಬುಂಡೇನ ಎತ್ತಿ ಕುಡುದ್ಬುಟ್ಟಾಗ
(3) ಮೂಂಗ್ ಮೂರ್ ಚೂರಾದಾಗ
(4) ನರ್ಕಕ್ ಇಳಿಸಿ ನಾಲಿಗೆ ಸೀಳಿಸಿದಾಗ



Visit CollegeDekho

40. ಬಗವಂತ್‌ನ ಕಣ್ಣು ಯಾರ ಮೇಲೆ

(1) ಬುಂಡೆಯ ಮೇಲೆ (2) ಯೆಂಡದ ಮೇಲೆ (3) ಬಕ್ತನ ಮೇಲೆ (4) ಕನ್ನಡದ ಮೇಲೆ

41. ದೇವರ ಮಾತಿಗೆ ಅಡ್ಡ ಬಂದರೆ ರತ್ನ ಹೀಗೆ ಮಾಡಿಕೊಳ್ಳುತ್ತಾನೆ :

(1) ಮೂಗ್‌ ಮೂರ್‌ ಚೂರಾಗಿ ಮುರಿಸಿಕೊಳ್ಳುತ್ತಾನೆ

(2) ಬುಂಡೆಯನ್ನು ಎತ್ತಿ ಕುಡಿದು ಬಿಡುತ್ತಾನೆ

(3) ಕಳದೋಯ್ತುಂತ ಕುಣಿದಾಡುತ್ತಾನೆ

(4) ಮೂಗ್ನಲ್ಲಿ ಕನ್ನಡ ಪದಪಾಡ್ತಾನೆ

42. ರತ್ನನಿಗೆ ಪ್ರಾಣ ಈ ಮೂರು :

(1) ಬುಂಡೆ, ಎಂಡ, ಬಗವಂತ
(2) ಬಗವಂತ, ರತ್ನ, ಯೆಡ್ತಿ
(3) ಯೆಂಡ, ಕನ್ನಡ, ಬಗವಂತ
(4) ಯೆಂಡ, ಯೆಡ್ತಿ, ಕನ್ನಡ ಪದಗೊಳ್

43. ಕೊಚ್ಕೊಂಡು ಹೋಗುವ ಎಲ್ಲಾ ಪದಾರ್ಥಗಳು :

(1) ಯೆಂಡ, ಯೆಡ್ತಿ (2) ಯೆಡ್ತಿ, ಕನ್ನಡ (3) ಕನ್ನಡ, ಯೆಂಡ (4) ಬಗವಂತ, ಬುಂಡೆ

44. ಹೊಂದದ ಪದವನ್ನು ಗುರುತಿಸಿ :

(1) ಬಗವಂತ
(2) ರತ್ನ
(3) ಬಕ್ತ
(4) ಬುಂಡೆ

45. 'ವ್ಹೋಗ್ಲಿ' ಪದದ ಗ್ರಾಂಥಿಕ ರೂಪ ಇದು :

(1) ಹೋಗಾಲಿ
(2) ವ್ಹೋಗಿಲಿ
(3) ಹೋಗಲಿ
(4) ಹೋಗ್ಲಿ

46. ಭಾಷಾ ಕೌಶಲಗಳಿವು ಅನುಕ್ರಮವಾದಾಗ :

(1) ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು

(2) ಮಾತನಾಡುವುದು, ಓದುವುದು, ಆಲಿಸುವುದು, ಬರೆಯುವುದು

(3) ಬರೆಯುವುದು, ಓದುವುದು, ಆಲಿಸುವುದು, ಮಾತನಾಡುವುದು

(4) ಮಾತನಾಡುವುದು, ಬರೆಯುವುದು, ಓದುವುದು, ಆಲಿಸುವುದು



Visit CollegeDekho

47. "ಭಾರತವಲ್ಲದೇ ಬೇರಾವ ದೇಶದಲ್ಲೂ ವಿದ್ಯಾರ್ಥಿಯ ಭಾಷೆಗೂ ಶಿಕ್ಷಣದ ಭಾಷೆಗೂ ಈ ಬಗೆಯ ಅಂತರವಿಲ್ಲ" ಎಂದು ಅಭಿಪ್ರಾಯ ಪಟ್ಟ ಶಿಕ್ಷಣ ತಜ್ಞರು ಇವರು :

(1) ಮಹಾತ್ಮ ಗಾಂಧಿ
(2) ರವೀಂದ್ರನಾಥ ಟಾಗೂರ್
(3) ಎಚ್. ನರಸಿಂಹಯ್ಯ
(4) ಮಹರ್ಷಿ ಅರವಿಂದ

48. ವಿದ್ಯಾರ್ಥಿಗಳ ಸೃಜನಶೀಲ ಭಾಷಾಪ್ರಯೋಗವು ಸಾಧ್ಯವಾಗುವ ಚಟುವಟಿಕೆ ಇದು :

(1) ಪ್ರಶ್ನೋತ್ತರ ಚಟುವಟಿಕೆ
(2) ಪದ್ಯಗಳನ್ನು ರಾಗವಾಗಿ ಹಾಡಿಸುವುದು
(3) ಗದ್ಯ–ಪದ್ಯಗಳನ್ನು ಓದಿಸುವುದು
(4) ಆಶುಭಾಷಣ ಚಟುವಟಿಕೆ

49. ಅನುಗಮನ ಪದ್ಧತಿಯ ಮೂಲಕ ವ್ಯಾಕರಣ ಬೋಧಿಸುವ ಸಂದರ್ಭದಲ್ಲಿ ಪಾಲಿಸುವ ಕ್ರಮ :

(1) ಉದಾಹರಣೆಗಳ ಸಂಗ್ರಹ ವಿವರಣೆ
(2) ಉದಾಹರಣೆಗಳ ವಿಶ್ಲೇಷಣೆ
(3) ಸೂತ್ರ ಅಥವಾ ಸಾಮಾನ್ಯ ನಿಯಮಗಳ ರಚನೆ
(4) ಸೂತ್ರ ವ್ಯಾಖ್ಯಾನಿಸಿ ನಂತರ ವಿವರಣೆ ನೀಡುವುದು

50. ಆರಂಭದಲ್ಲಿ ಮಗುವಿನ ಸ್ವಾಭಾವಿಕ ಭಾಷಾ ಕಲಿಕೆ ಕ್ರಮ ಹೀಗಿದೆ :

(1) ಓದು, ಬರಹ, ಮಾತು, ಆಲಿಸು
(2) ಆಲಿಸು, ಮಾತು, ಓದು, ಬರಹ
(3) ಮಾತು, ಆಲಿಸು, ಓದು, ಬರಹ
(4) ಬರಹ, ಓದು, ಆಲಿಸು, ಓದು

51. ಇವುಗಳಲ್ಲಿ ಸಜಾತೀಯ ಒತ್ತಕ್ಷರದಿಂದ ಕೂಡಿರುವ ಪದ :

(1) ಬ್ರಹ್ಮಾಸ್ತ್ರ
(2) ಒತ್ತಕ್ಷರ
(3) ಲಜ್ಜಾಸ್ಪದ
(4) ಒಡ್ಯಾಣ

52. ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ ; ಇಲ್ಲಿ ಬಳಸಿರುವ ಲೇಖನ ಚಿಹ್ನೆ :

(1) ಪೂರ್ಣವಿರಾಮ
(2) ಅಲ್ಪವಿರಾಮ
(3) ಪ್ರಶ್ನಾರ್ಥಕ
(4) ಅರ್ಧವಿರಾಮ

53. 'ಬಿಸರುಹೋದ್ಭವಗಣಂ ರಸದಶಸ್ಥಾನದೊಳ್। ಬಿಸರುಹನೇತ್ರ ಗಣಮೆ ಬರ್ಕುಳಿದೆಡೆ । ಬಿಸರುಹನೇತ್ರೇತ್ರಿಪದಿಗೆ ।।'- ತ್ರಿಪದಿಯ ಲಕ್ಷಣ ತಿಳಿಸುವ ಈ ಪದ್ಯವಿರುವ ಕೃತಿ :

(1) ಶಬ್ದಮಣಿದರ್ಪಣಂ
(2) ಛಂದೋಂಬುಧಿ
(3) ಕಾವ್ಯಾವಲೋಕನ
(4) ಕವಿಜಿಹ್ವಾಬಂಧನ



Visit CollegeDekho

54. ಮನೆ ಮತ್ತು ಶಾಲೆಯು ಮಗುವಿನ ಭಾಷಾ ಕಲಿಕಾ ತಾಣಗಳು – ಈ ವಾಕ್ಯವು :
(1) ಸಂಯೋಜಿತ ವಾಕ್ಯ (2) ಮಿಶ್ರ ವಾಕ್ಯ (3) ಸರಳ ವಾಕ್ಯ (4) ಸಂಯುಕ್ತ ವಾಕ್ಯ

55. ಶುದ್ಧ ಭಾಷಾ ಪ್ರಯೋಗದಿಂದ ಕೂಡಿದ ಪದವಿದು :
(1) ಸಂಬಂದ (2) ಸಂಭಂದ (3) ಸಂಬಂಧ (4) ಸಂಭಂಧ

56. ಪರಿಹಾರ ಬೋಧನೆ ಕೈಗೊಳ್ಳುವ ಸಂದರ್ಭದಲ್ಲಿ ಅನುಸರಿಸುವ ಕ್ರಮ :
(1) ಘಟಕ ಪರೀಕ್ಷೆ, ಮಾಸಿಕ ಮೌಲ್ಯಮಾಪನ, ವಾರ್ಷಿಕ ಮೌಲ್ಯಮಾಪನ
(2) ನೈದಾನಿಕ ಪರೀಕ್ಷೆ, ಪರಿಹಾರ ಬೋಧನೆ, ಸಾಫಲ್ಯ ಪರೀಕ್ಷೆ
(3) ಘಟಕ ಮೌಲ್ಯಮಾಪನ, ಸಂಕಲನಾತ್ಮಕ ಮೌಲ್ಯಮಾಪನ, ರೂಪಣಾತ್ಮಕ ಮೌಲ್ಯಮಾಪನ
(4) ರೂಪಣಾತ್ಮಕ ಮೌಲ್ಯಮಾಪನ, ಅರ್ಧ ವಾರ್ಷಿಕ ಮೌಲ್ಯಮಾಪನ, ಪರಿಹಾರ ಬೋಧನೆ

57. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು :
(1) ಸಾಮಾನ್ಯ ವಾಕ್ಯ (2) ಸಂಯೋಜಿತ ವಾಕ್ಯ (3) ಮಿಶ್ರ ವಾಕ್ಯ (4) ಪ್ರಶ್ನಾರ್ಥಕ ವಾಕ್ಯ

58. ಮಕ್ಕಳ ಆಲಿಸುವಿಕೆಯಲ್ಲಿ ಕಂಡುಬರುವ ದೋಷ ಇದು :
(1) ಉಚ್ಚಾರಣಾ ದೋಷ (2) ಉಗ್ಗುವಿಕೆ
(3) ಕಾಗುಣಿತ ದೋಷ (4) ಮಾನಸಿಕ ಏಕಾಗ್ರತೆಯ ಕೊರತೆ

59. ಸಮಾನ ಗಾತ್ರ, ಸಮಾನ ಎತ್ತರ, ಸಮಾನ ಅಂತರ ನೀಡಿ ಕುಳಿತು ಬರೆಯುವ ಭಂಗಿ, ಲೇಖನಿ ಹಿಡಿಯುವ ಕ್ರಮ ಇತ್ಯಾದಿಗಳ ಬಗ್ಗೆ ನೀಡಿದ ಚಟುವಟಿಕೆ ಈ ಕೆಳಕಂಡ ಕ್ರಿಯಾ ಸಂಶೋಧನೆಗೆ ಸಂಬಂಧಿಸಿದೆ :
(1) ಮಕ್ಕಳ ಉಚ್ಚಾರಣಾ ದೋಷಕ್ಕೆ
(2) ಮಕ್ಕಳ ಕೈಬರಹ ಸುಧಾರಣೆ
(3) ಮಕ್ಕಳ ಓದುಗಾರಿಕೆ
(4) ಮಕ್ಕಳ ಪ್ರಬಂಧ ರಚನೆ

60. ವಿದ್ಯಾರ್ಥಿಗಳ ಅನೌಪಚಾರಿಕ ಭಾಷಾಕಲಿಕೆ ಇದರಿಂದ ಸಾಧ್ಯ :
(1) ತರಗತಿ ಬೋಧನಾ ಚಟುವಟಿಕೆ
(2) ಮೌಲ್ಯಮಾಪನ ಚಟುವಟಿಕೆ
(3) ರೇಡಿಯೋ, ದೂರದರ್ಶನ ಮತ್ತು ನಿಯತಕಾಲಿಕೆಗಳ ಬಳಕೆ
(4) ಪಠ್ಯಪುಸ್ತಕಗಳ ಓದು.



Visit CollegeDekho

# PART – II

## Language – II

## ENGLISH

**Read the given passage and answer the questions (Q.No. 31 to Q.No. 35) that follow by selecting the most appropriate option.**

**Alexander Fleming.**

His name was Fleming, and he was a poor Scottish farmer. One day, while trying to eke out a living for his family, he heard a cry for help coming from a nearby bog. He dropped his tools and ran to the bog. There, mired to his waist in black muck, was a terrified boy, screaming and struggling to free himself. Farmer Fleming saved the lad from what could have been a slow and terrifying death.

The next day, a fancy carriage pulled up at the Scotsman's sparse surroundings. An elegantly dressed nobleman stepped out and introduced himself as the father of the boy Farmer Fleming had saved.

"I want to repay you", said the nobleman. "You saved my son's life". "No, I can't accept payment for what I did", the Scottish farmer replied, waving aside the offer. At that moment, the farmer's own son came to the door of the family hovel.

"Is that your son?" the nobleman asked. "Yes", the farmer replied proudly. "I'll make you a deal. Let me take him and give him a good education. If the lad is anything like his father, he'll grow into a man you can be proud of", said the nobleman. And that he did. In time, Farmer Fleming's son graduated from St.Mary's Hospital School in London, and went on to become known throughout world as the noted Sir Alexander Fleming, the discoverer of Pencillin. Years afterwards, the nobleman's son was stricken with pneumonia. What saved him? Penicillin. The name of the nobleman? Lord Ragen Churchill. His son's name? Sir Winston Churchill.

**31.** The noun form of 'introduce' is
(1) Introduces
(2) Introducing
(3) Introduced
(4) Introduction

**32.** The nobleman wanted to thank the farmer because
(1) the farmer saved the nobleman's son
(2) the farmer dropped his tools
(3) the farmer refused payment
(4) the farmer's son treated the nobleman's son



Visit CollegeDekho

33. The nobleman finally expressed his gratitude to the farmer by
(1) giving him money
(2) educating the farmer's son
(3) visiting the farmer's house
(4) treating his son at St.Mary's Hospital

34. The phrase 'eke out a living' can be synonymous with
(1) give a cold shoulder
(2) spill the beans
(3) to cut corners
(4) make ends meet.

35. "Is that your son?"
Language function used in the above sentence is
(1) requesting (2) enquiring
(3) asking for direction (4) seeking permission

**Directions (Q. No: 36 to Q. No 40)**

**Read the poem given below and answer the questions that follow Choosing the best alternative.**

LUCY

– William Wordsworth

She dwelt among the untrodden ways
Beside the springs of Dove
A maid whom where none to praise
And very few to love;
A violet by a mossy stone
Half hidden from the eye
Fair as a star, when only one
Is shinning in the sky
She lived unknown, and few could know
When Lucy ceased to be
But she is in her grave, and oh.
The difference to me!

36. In the poem, 'she' refers to
(1) Poet (2) Lucy (3) Dove (4) Star

37. A violet by a mossy stone
Half hidden from the eye!
Figure of speech employed here is
(1) simile (2) personification (3) alliteration (4) metaphor




Visit CollegeDekho

**38.** eye: sky:: ways :
(1) dove (2) be (3) praise (4) stone

**39.** Choose the one true sentence about the poem.
(1) She was a famous person. (2) She lived beside a river.
(3) She lived in a busy city. (4) She was very popular.

**40.** The flower mentioned in the poem is
(1) Dove (2) Mossy (3) Spring (4) Violet

**The following pie chart lists the various sectors responsible for gas emission and their share in creating global warming. Study the chart and answer the questions that follow (Q.No.41 to Q.No. 45)**




(Source : Internet)

**41.** Two sectors which contribute equally in creating global warming are
(1) Commercial and residential
(2) Commercial and agriculture
(3) Residential and agriculture
(4) Residential and others


**42.** Maximum amount of gas emitting sector is
(1) Transport (2) Industry
(3) Electricity generation (4) Agriculture

**43.** Emission by transport and industry put together
(1) 45% (2) 46% (3) 44% (4) 47%

**44.** The least harmful sector is
(1) commercial (2) residential (3) industry (4) others



Visit CollegeDekho

45.  represents

(1) electricity generation
(2) agriculture
(3) transport
(4) industry

46. An example for descriptive type of questions is

(1) essay type
(2) true/false type
(3) multiple choice type
(4) gap filling type

47. The primary aim of teaching-learning English is to develop

(1) reading skill
(2) writing skill
(3) listening skill
(4) communicative skill

48. Learners need to brainstorm ideas, organise them, draft, edit and revise their work. This is a process of

(1) listening (2) speaking (3) writing (4) reading

49. Holistic evaluation of the learner is done by

(1) continuous and comprehensive evaluation
(2) summative evaluation
(3) diagnostic test
(4) aptitude test

50. An example for extensive reading

(1) Reading the headlines of newspaper
(2) Reading the textbooks for exams
(3) Finding the meaning in a dictionary
(4) Reading novels

51. Teacher tells students a story and then asks, comprehending questions. Such an activity usually helps

(1) visual learners
(2) auditory learners
(3) tactile learners
(4) kinaesthetic learners

52. The trisyllabic word is

(1) Candidate (2) Application (3) Marriage (4) Contempt



Visit CollegeDekho

53. One of the following aid is considered as a visual aid.
(1) Pictures (2) Audio tapes (3) Lectures (4) Radio

54. We use 'will' to express
(1) Obligation in the future (2) Decisions about the future
(3) Fixed plans (4) Tell previous happenings

55. By giving practice to a child in speaking at a natural speed, the teacher is focussing on developing
(1) accuracy (2) appropriacy (3) fluency (4) functions

56. Monday
7 June.
Today was the first day of my college. I left home at 9 O' Clock. Reached college at 9.45. Met my school buddy Rosy after so many years. Oh, What a day it was!
This is a
(1) Diary (2) Message (3) Letter (4) Dialogue

57. Teacher says: 'I bought a pen' students replace 'I' and 'pen' and frame the sentence. This is
(1) Substitution drill (2) Expansion drill
(3) Repetition drill (4) Chain drill

58. This is the characteristic of a constructivist classroom
(1) Instructor gives, students receive
(2) Learning is interaction– building on what students already know
(3) Strict adherence to fixed curriculum
(4) Instructor assumes a directive role

59. The merit of the Bilingual method of teaching English is
(1) It saves a lot of time for pattern practice in English by quickly learning concepts through the mother tongue
(2) Students learn mother tongue along with English
(3) Very useful in senior classes
(4) Reading and writing are postponed to a later stage

60. "Daily we listen to advertisements". This is an example for
(1) Listening for instructions (2) Listening for information
(3) Persuasive listening (4) Face–to–face listening



Visit CollegeDekho

# KANNADA MEDIUM

## PART – III

## CHILD DEVELOPMENT AND PEDAGOGY

61. ವಿಕಸನವೆಂದರೆ, ಕ್ರಮಬದ್ಧವಾಗಿ ಊಹಿಸಬಹುದಾದ ವಿನ್ಯಾಸದಲ್ಲಿ ಉಂಟಾಗುವ ಹಾಗೂ ಕೆಳಗಿನ ಅಂಶಗಳಲ್ಲಿ ಪ್ರಗತಿಪರ ಸರಣೀಕೃತ ಬದಲಾವಣೆಗಳ ಫಲಿತವಾಗಿದೆ.
   (1) ಬೆಳವಣಿಗೆ ಮತ್ತು ಅನುಭವ
   (2) ಪರಿಪಕ್ವತೆ ಮತ್ತು ಅನುಭವ
   (3) ಬೋಧನೆ ಮತ್ತು ಅನುಭವ
   (4) ಬೆಳವಣಿಗೆ ಮತ್ತು ಪರಿಪಕ್ವತೆ

62. ಕೋಲ್ಸ್‌ಬರ್ಗ್‌ರವರ ವ್ಯಾಖ್ಯಾನದ ಪ್ರಕಾರ ವ್ಯಕ್ತಿಯ ಈ ಪ್ರಜ್ಞೆಯ ವಿಕಸನವು ನೈತಿಕ ವಿಕಸನವಾಗುತ್ತದೆ.
   (1) ಕಾರಣೀಕರಿಸುವಿಕೆ
   (2) ಆಲೋಚಿಸುವಿಕೆ
   (3) ನ್ಯಾಯ
   (4) ತೀರ್ಮಾನಿಸುವಿಕೆ

63. "ಲಿಂಗ ಪಾತ್ರ" ಎಂಬ ಪದವನ್ನು 1955ರಲ್ಲಿ ಪ್ರಥಮ ಬಾರಿಗೆ ಬಳಸಿದವರು
   (1) ಆರ್.ಡಬ್ಲ್ಯು. ಕಾನೆಲ್
   (2) ವರ್ನ್ ಬುಲ್ಲೋ
   (3) ಜಾನ್ ಮನಿ
   (4) ಗಾಫ್‌ಮ್ಯಾನ್

64. ಸಮಕಾಲೀನ ಸಮಾಜಗಳಲ್ಲಿ ಸಾಮಾಜೀಕರಣದ ಮೂಲ ಸಂಸ್ಥೆಗಳು
   A. ಕುಟುಂಬ
   B. ಶಾಲೆ
   C. ಸಮ ವಯಸ್ಕರು
   D. ಸಮುದಾಯ
   (1) (A) ಮತ್ತು (B) ಮಾತ್ರ
   (2) (B) ಮತ್ತು (C) ಮಾತ್ರ
   (3) (A), (B) ಮತ್ತು (C)
   (4) (A), (B), (C) ಮತ್ತು (D)

65. ಕೆಳಗಿನ ಯಾವುದು ಮಕ್ಕಳ ಸಂಜ್ಞಾನಾತ್ಮಕ ಕಲಿಕಾ ಶೈಲಿಯಾಗುವುದಿಲ್ಲ
   (1) ಶ್ರವಣೇಂದ್ರಿಯದ ಶೈಲಿ
   (2) ದೃಶ್ಯ ಆಧಾರಿತ ಶೈಲಿ
   (3) ಸ್ಪರ್ಶ ಸಂಬಂಧೀ ಶೈಲಿ
   (4) ಊಹಾಧಾರಿತ ಶೈಲಿ



Visit CollegeDekho

66. ಈ ಕೆಳಕಂಡವುಗಳಲ್ಲಿ ಯಾವುದು ರಚನಾವಾದ ಪದ್ಧತಿ ಆಧಾರಿತ ಬೋಧನೆಯಲ್ಲ
(1) ಪರಿಕಲ್ಪನಾ ನಕ್ಷೆ
(2) ಸಾಮಾಜಿಕ-ವಿಚಾರಣಾ ವಿಧಾನ
(3) ಉಪನ್ಯಾಸ-ಪ್ರಾತ್ಯಕ್ಷಿಕೆ ವಿಧಾನ
(4) ಸಹಕಾರ ಕಲಿಕಾ ತಂತ್ರಗಳು

67. ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಮುಖ ಬದಲಾವಣೆಯನ್ನು 1974ರಲ್ಲಿ ಈ ಕೆಳಗಿನ ಕಾರ್ಯಕ್ರಮವನ್ನು ಪ್ರಾರಂಭಿಸುವುದರೊಂದಿಗೆ ಸಾಧಿಸಲಾಯಿತು
(1) ಯೋಜನೆ ಸಂಘಟಿತ ಶಿಕ್ಷಣ ಅಭಿವೃದ್ಧಿ (PIED)
(2) ಸರ್ವರಿಗೂ ಶಿಕ್ಷಣ [EFA]
(3) ನ್ಯೂನತೆ ಹೊಂದಿರುವ ಮಗುವಿಗೆ ಸಮಗ್ರ ಶಿಕ್ಷಣ (IEDC)
(4) ಜಿಲ್ಲಾ ಪುನರ್‌ವಸತಿ ಕೇಂದ್ರ ಕಾರ್ಯಕ್ರಮ (DRCS)

68. ಉದಾಹರಣೆಗಳಿಂದ ನಿಯಮದೆಡೆಗೆ ಸಾಗುವ ಕಾರಣೀಕರಿಸುವ ಪ್ರಕ್ರಿಯೆಯನ್ನು ಹೀಗೆಂದು ಕರೆಯುತ್ತಾರೆ
(1) ವಿಶ್ಲೇಷಣೆ
(2) ಸಂಶ್ಲೇಷಣೆ
(3) ಅನುಗಮನ
(4) ನಿಗಮನ

69. ಜೀನ್ ಪಿಯಾಜೆಯವರ ಪ್ರಕಾರ, ಬಾಲ್ಯಾವಸ್ಥೆಯ ಪ್ರಮುಖವಾದ ಸಂಜ್ಞಾನಾತ್ಮಕ ವಿಕಸನವು ಇದನ್ನು ಬೆಳೆಸುತ್ತದೆ
(1) ಜ್ಞಾನ
(2) ಬೌದ್ಧಿಕ ಕೌಶಲ್ಯಗಳು
(3) ಸಂಜ್ಞಾನಾತ್ಮಕ ತಂತ್ರಗಳು
(4) ಪರಿಕಲ್ಪನೆ

70. ತರಗತಿಯಲ್ಲಿ ರೂಪಣಾತ್ಮಕ ಮೌಲ್ಯಾಂಕನದ ಕಾರ್ಯವೆಂದರೆ
(1) ವಿದ್ಯಾರ್ಥಿಯ ನಿಯೋಜಿತ ಕಾರ್ಯಕ್ಕೆ ಅಂಕಗಳನ್ನು ನಿಗದಿಪಡಿಸುವುದು
(2) ವಿದ್ಯಾರ್ಥಿಯ ವರ್ತನೆಯ ಬಗ್ಗೆ ತೀರ್ಮಾನ ಮಾಡುವುದು
(3) ವಿದ್ಯಾರ್ಥಿಯ ಸಾಧನೆಯ ಮಾಪನ ನಿಖರವಾಗಿ ಮಾಡುವುದು
(4) ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ಒದಗಿಸುವುದು



Visit CollegeDekho

71. ಪ್ರಾಸಬದ್ಧ ವಿನ್ಯಾಸಗಳನ್ನು ಪುನರುತ್ಪಾದಿಸುವಲ್ಲಿ ಒಬ್ಬ ವಿದ್ಯಾರ್ಥಿಗೆ ತೊಂದರೆಯಿದೆ ಎಂದಾಗ ಈ ಅಂಶಕ್ಕೆ ಸಂಬಂಧಿಸಿದ ಕಲಿಕಾ ನ್ಯೂನತೆ ಹೊಂದಿರುತ್ತಾರೆ

(1) ಭಾಷೆ (2) ಸ್ಮೃತಿ

(3) ಅವಧಾನ ಅಸ್ಪಷ್ಟತೆ (4) ಗ್ರಹಿಕೆ ಅಸ್ಪಷ್ಟತೆ

72. ಕಲಿಕೆಯ ಕಾರ್ಯಗಳನ್ನು ರೂಪಿಸುವಾಗ ರಚನಾತ್ಮಕ ಶಿಕ್ಷಕರು ಈ ಸಂಜ್ಞಾನಾತ್ಮಕ ಪರಿಭಾಷೆಯನ್ನು ಬಳಸುತ್ತಾರೆ

(1) ಗುರ್ತಿಸುವರು (2) ವರ್ಣಿಸುವರು

(3) ವಿಶ್ಲೇಷಿಸುವರು (4) ವಾಚಿಸುವರು

73. ಕೆಳಗಿನ ಯಾವ ಕಾರ್ಯಗಳು ಸಾಂಸ್ಕೃತಿಕವಾಗಿ ಸಂಘಟನೆಯಾಗುವ ವಿಕಸನ ಪ್ರಕ್ರಿಯೆಯಲ್ಲಿ ಕಲಿಕೆಯು ಒಂದು ಆವಶ್ಯಕ ಮತ್ತು ಸಾರ್ವತ್ರಿಕ ಅಂಶವಾಗಿದೆಯೆಂದು ವೈಗಾಸ್ಕಿಯವರು ಹೇಳುತ್ತಾರೆ

(1) ಸಾಮಾಜಿಕ ಕಾರ್ಯಗಳು (2) ಮನೋವೈಜ್ಞಾನಿಕ ಕಾರ್ಯಗಳು

(3) ಸಾಂಸ್ಕೃತಿಕ ಕಾರ್ಯಗಳು (4) ದೈಹಿಕ ಕಾರ್ಯಗಳು

74. ಕಲಿಕೆಯ ಪ್ರಕ್ರಿಯೆಯನ್ನು ಗಣಿತೀಯವಾಗಿ ಈ ರೀತಿ ವ್ಯಕ್ತಪಡಿಸಲಾಗಿದೆ

(1) ಅನುವಂಶೀಯತೆ × ಪರಿಸರ (2) ಜೀವಿ × ಅನುವಂಶೀಯತೆ

(3) ಜೀವಿ × ಪರಿಸರ (4) ಜೀವಿ × ವರ್ತನೆ

75. ವೈಗಾಸ್ಕಿಯವರ ವಾದದ ಪ್ರಕಾರ ಮಾನವರಲ್ಲಿ ಉಂಟಾಗುವ ಅನುಭವದ ಪ್ರತಿಫಲನೆ ಮತ್ತು ವಿಸ್ತರಣೆಯ ಮಾಧ್ಯಮವು

(1) ಆಲೋಚನೆ (2) ಸಾಮಾಜೀಕರಣ

(3) ಬುದ್ಧಿವಂತಿಕೆ (4) ಭಾಷೆ

76. ಒಂದು ಸಾಧನೆ ಪರೀಕ್ಷೆ ಕೆಳಗಿನವುಗಳಲ್ಲಿ ಯಾವುದನ್ನು ಮಾಪನ ಮಾಡುವುದಿಲ್ಲ

(1) ಜ್ಞಾನ (2) ತಿಳುವಳಿಕೆ

(3) ಕೌಶಲ್ಯಗಳು (4) ಮನೋಭಾವನೆ

77. ತರಗತಿಯಲ್ಲಿ ಶಿಕ್ಷಕರು ಬಳಸುವ ಉದ್ದೀಪನ ಬದಲಾವಣೆಯು ಕೆಳಗಿನ ಯಾವುದರ ತಂತ್ರವಾಗಿದೆ

(1) ಅಭಿಪ್ರೇರಣೆಯನ್ನು ವರ್ಧಿಸುವುದು (2) ಕುತೂಹಲವನ್ನು ಕೆರಳಿಸುವುದು

(3) ಆಸಕ್ತಿಯನ್ನು ಸೃಷ್ಟಿಸುವುದು (4) ಗುರಿಯನ್ನು ನಿರ್ದೇಶಿಸುವುದು



Visit CollegeDekho

78. ಬಹುವಿಧ ಬುದ್ಧಿಶಕ್ತಿಯು ಬಹುವಿಧ ವ್ಯಕ್ತಿಗಳಲ್ಲಿ ಬೆಳವಣಿಗೆ ಮತ್ತು ವಿಕಸನಗೊಳ್ಳುವಾಗ, ಹೊವರ್ಡ್ ಗಾರ್ಡನರ್‌ರವರ ಪ್ರಕಾರ ಈ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ

(1) ಅನುವಂಶೀಯ ಲಕ್ಷಣಗಳು

(2) ಪರಿಸರದ ಅನುಭವಗಳು

(3) ಅನುವಂಶೀಯ ಲಕ್ಷಣಗಳು ಮತ್ತು ಪರಿಸರದ ಅನುಭವಗಳು

(4) ಮಾನಸಿಕ ಸಾಮರ್ಥ್ಯಗಳು

79. ಈ ಕೆಳಗಿನ ಯಾವುದನ್ನು ಮಾಪನ ಮಾಡಲು ಪ್ರಮಾಣಕ ಆಧಾರಿತ ಪರೀಕ್ಷೆಗಳನ್ನು ಬಳಸಬಹುದು

(1) ಸಾಧನೆ
(2) ಗಳಿಕೆ
(3) ಅಭಿಕ್ಷಮತೆ
(4) ಆಸಕ್ತಿ

80. ಪೂರ್ವೋತ್ತರ – ಸಂಪ್ರದಾಯಬದ್ಧ ಹಂತದಲ್ಲಿ ಮಕ್ಕಳ ನೈತಿಕ ತೀರ್ಪುಗಳು ಕೆಳಗಿನ ಯಾವ ಸಾರ್ವತ್ರಿಕ ತತ್ವಗಳಲ್ಲಿರುವ ನಂಬಿಕೆಯ ಮೇಲೆ ಆಧಾರವಾಗಿರುತ್ತವೆ

(1) ಗೌರವ, ನ್ಯಾಯ ಮತ್ತು ಸಮತೆ

(2) ನ್ಯಾಯ, ಸಮತೆ ಮತ್ತು ನಿಯಮಗಳು

(3) ನಿಯಮಗಳು, ನಿಬಂಧನೆಗಳು ಮತ್ತು ನ್ಯಾಯ

(4) ನ್ಯಾಯ, ಉಪಯುಕ್ತತೆ ಮತ್ತು ಆಸಕ್ತಿ

81. ಈ ಕೆಳಗೆ ಕೊಟ್ಟಿರುವ ಯಾವ ಬೆಳವಣಿಗೆಯ ಅವಧಿಯಲ್ಲಿರುವ ಮಕ್ಕಳ ಮೇಲೆ ಸಮ ವಯಸ್ಕರ ಪ್ರಭಾವ ಅತ್ಯಂತ ಶಕ್ತಿಶಾಲಿಯಾಗಿರುತ್ತದೆ

(1) ಪೂರ್ವ ಬಾಲ್ಯಾವಸ್ಥೆಯ ಅವಧಿ
(2) ಉತ್ತರ ಬಾಲ್ಯಾವಸ್ಥೆಯ ಅವಧಿ
(3) ಕಿಶೋರಾವಸ್ಥೆ ಅವಧಿ
(4) ಮೇಲಿನ ಎಲ್ಲಾ ಅವಧಿಗಳು

82. ಈ ಕೆಳಗಿನವುಗಳಲ್ಲಿ ಯಾವುದು ವಿಶೇಷ ಅಗತ್ಯವುಳ್ಳ ಮಕ್ಕಳ ನಿರ್ದಿಷ್ಟವಾದ ಪ್ರಮುಖ ವಿಷಯವಲ್ಲ

(1) ವೈದ್ಯಕೀಯ ವಿಷಯಗಳು
(2) ಕಲಿಕಾ ವಿಷಯಗಳು
(3) ಸಾಮಾಜಿಕ ವಿಷಯಗಳು
(4) ವಿಕಸನಾತ್ಮಕ ವಿಷಯಗಳು

83. ಅವಧಾನವು ಕೇವಲ ಸಂಜ್ಞಾನಾತ್ಮಕ ಉತ್ಪನ್ನವಲ್ಲ, ಆದರೆ ಇವುಗಳಿಂದ ಅವಶ್ಯಕವಾಗಿ ನಿರ್ಣಯವಾಗುತ್ತದೆ

(1) ವಯಸ್ಸು ಮತ್ತು ಪಕ್ವತೆ
(2) ಪಕ್ವತೆ ಮತ್ತು ಆಸಕ್ತಿ
(3) ಮನೋಭಾವನೆ ಮತ್ತು ಬುದ್ಧಿಶಕ್ತಿ
(4) ಆಸಕ್ತಿ ಮತ್ತು ಮನೋಭಾವನೆ



Visit CollegeDekho

84. ಹೆಚ್ಚಿನ ಸಂಖ್ಯೆಯಲ್ಲಿ, ಅಂದರೆ ಸುಮಾರು 60% ಶಾಲಾ ಮಕ್ಕಳು ತಮ್ಮ ಬುದ್ಧಿಶಕ್ತಿ ಪ್ರಮಾಣವನ್ನು (I.Q.) ಹೊಂದಿರುವ ವ್ಯಾಪ್ತಿ

(1) 70 – 100
(2) 80 – 110
(3) 90 – 100
(4) 90 – 110

85. ಮಗುವು ಇತರರಿಂದ ಪ್ರಭಾವಿತವಾಗುವ ನಿರಂತರ ಪ್ರಕ್ರಿಯೆಯಲ್ಲಿ ಪೋಷಕರು ಅತ್ಯಂತ ಪ್ರಧಾನ ಪಾತ್ರ ವಹಿಸುವುದನ್ನು ಹೀಗೆನ್ನುತ್ತಾರೆ

(1) ಪೋಷಕತ್ವ
(2) ಸಾಮಾಜೀಕರಣ
(3) ವಿಕಸನ
(4) ಬೆಳವಣಿಗೆ

86. ಕಲ್ಲಿಕಾಕ್‌ರವರ ಕುಟುಂಬದ ಮೇಲೆ ಹೆಚ್.ಹೆಚ್. ಗೊಡ್ಡಾರ್ಡ್ ನಡೆಸಿದ ಅಧ್ಯಯನವು ಈ ಅಂಶ/ಗಳು ವೈಯಕ್ತಿಕ ವ್ಯತ್ಯಾಸಗಳನ್ನು ನಿರ್ಧರಿಸುತ್ತದೆ/ವೆ ಎಂಬುದನ್ನು ತೋರಿಸಿಕೊಟ್ಟಿದೆ

(1) ಅನುವಂಶೀಯತೆ
(2) ಪರಿಸರ
(3) ಅನುವಂಶೀಯತೆ ಮತ್ತು ಪರಿಸರ
(4) ಅನುವಂಶೀಯತೆಯೂ ಅಲ್ಲ, ಪರಿಸರವೂ ಅಲ್ಲ

87. ಈ ಕೆಳಗಿನವುಗಳಲ್ಲಿ ಯಾವುದು ಸಂವೇಗಾತ್ಮಕ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಅಂಶವಲ್ಲ

(1) ಬುದ್ಧಿಶಕ್ತಿ
(2) ಆಸಕ್ತಿ
(3) ಶಾಲಾ ಪರಿಸರ
(4) ಸಮ ವಯಸ್ಕರು

88. ಯಥಾರ್ಥ ವಿಕಸನದ ಮಟ್ಟ ಮತ್ತು ಅಂತಸ್ಸತ್ವ ವಿಕಸನದ ಮಟ್ಟದ ನಡುವಿನ ಅಂತರವನ್ನು ಹೀಗೆನ್ನುತ್ತಾರೆ

(1) ಬೌದ್ಧಿಕ ವಿಕಸನದ ವಲಯ
(2) ಸಾಮಾಜಿಕ ವಿಕಸನದ ವಲಯ
(3) ಸಾಮೀಪ್ಯ ವಿಕಸನದ ವಲಯ
(4) ಸಂಜ್ಞಾನಾತ್ಮಕ ವಿಕಸನದ ವಲಯ

89. ನಿರರ್ಗಳತೆ, ನಮ್ಯತೆ ಮತ್ತು ವಿಸ್ತರಣೆ ಇವೆಲ್ಲವೂ ಸೃಜನಶೀಲ ಸಾಮರ್ಥ್ಯಗಳ ವಿಶಿಷ್ಟ ಅಂಶಗಳು. ಇದನ್ನು ಹೇಳಿದವರು

(1) ಸ್ಕಿನ್ನರ್
(2) ಜಂಗ್
(3) ರಾಬರ್ಟ್ ಗ್ಯಾನೆ
(4) ಗಿಲ್ಫರ್ಡ್

90. ಬ್ರೂನರ್‌ರವರ ಸಂಶೋಧನಾ ಪದ್ಧತಿ ಆಧಾರವಾಗಿರುವ ಮನೋವೈಜ್ಞಾನಿಕ ತತ್ವ

(1) ವೀಕ್ಷಣೆಯ ಮೂಲಕ ಕಲಿಕೆ
(2) ಅನುಬಂಧಿತ ಕಲಿಕೆ
(3) ಮಾಡುವ ಮೂಲಕ ಕಲಿಕೆ
(4) ಅನುಕರಣೆಯ ಮೂಲಕ ಕಲಿಕೆ



Visit CollegeDekho

# KANNADA MEDIUM

## PART – IV

## MATHEMATICS

91. ಒಂದು ವೃತ್ತದಲ್ಲಿ ವ್ಯಾಸ ಮತ್ತು ತ್ರಿಜ್ಯದ ಅನುಪಾತ

(1) 2 : 1 (2) 1 : 2 (3) 1 : 3 (4) 3 : 2

92. ಒಂದು ವರ್ಗಪಾದ ಗೋಪುರದಲ್ಲಿ ತ್ರಿಭುಜಾಕಾರದ ಮುಖಗಳ ಸಂಖ್ಯೆ



(1) 3 (2) 5 (3) 4 (4) 2

93. 18m × 12m × 9m ಲೋಹೀಯ ಆಯತಘನವನ್ನು ಕರಗಿಸಿ ಮಾಡಬಹುದಾದ 3m ಅಳತೆಯ ಘನಗಳ ಸಂಖ್ಯೆ

(1) 64 (2) 30 (3) 28 (4) 72

94. ಒಂದು ನೇರ ವೃತ್ತ ಪಾದ ಸ್ತಂಭಾಕೃತಿಯ ವಕ್ರ ಮೇಲ್ಮೈ ವಿಸ್ತೀರ್ಣ $4.4 m^2$ ಆಗಿದೆ. ಸ್ತಂಭಾಕೃತಿಯ ಪಾದದ ತ್ರಿಜ್ಯವು 0.7 m ಆದರೆ, ಅದರ ಎತ್ತರ

(1) 1m (2) 0.5m (3) 2m (4) 2.2m

95. ಒಂದು ಶಂಕುವಿನ ಭಿನ್ನಕದ ಘನಫಲ ಕಂಡು ಹಿಡಿಯುವ ಸೂತ್ರ

(1) $V = \pi r^2 h$

(2) $V = \frac{1}{3}\pi h [r_1^2 + r_2^2 + 2r_1r_2]$

(3) $V = \frac{1}{3}\pi [r_1^2 + r_2^2 + r_1r_2]$

(4) $V = \frac{1}{3}\pi h [r_1^2 + r_2^2 + r_1r_2]$

SPACE FOR ROUGH WORK



Visit CollegeDekho

**96.** ಎರಡು ಸಂಖ್ಯೆಗಳು 2 : 3 ಅನುಪಾತದಲ್ಲಿದೆ. ಅವುಗಳ ಲ.ಸಾ.ಅ. 48 ಆದರೆ, ಆ ಸಂಖ್ಯೆಗಳ ಮೊತ್ತ

(1) 20
(2) 30
(3) 40
(4) 48

**97.** 120ರ ಅವಿಭಾಜ್ಯ ಅಪವರ್ತನಗಳ ಗುಣಲಬ್ಧವನ್ನು $120 = 2^x \times 3^y \times 5^z$ ಎಂದು ಬರೆದಾಗ $y + z =$

(1) 4
(2) 2
(3) 5
(4) 6

**98.** 0.366666...ರ $\frac{p}{q}$ ರೂಪ

(1) $\frac{11}{30}$
(2) $\frac{13}{30}$
(3) $\frac{14}{23}$
(4) $\frac{4}{7}$

**99.** $\frac{2\sqrt{3}+3\sqrt{2}}{2\sqrt{3}-3\sqrt{2}} = a + b\sqrt{6}$ ಆದಾಗ $a$ ಮತ್ತು $b$ ಬೆಲೆಗಳು

(1) (5, 2)
(2) (–5, –2)
(3) (5, –2)
(4) (–5, +2)

**SPACE FOR ROUGH WORK**

Visit CollegeDekho

100. ಇವುಗಳಲ್ಲಿ ಸರಿಯಲ್ಲದ ಹೇಳಿಕೆ

(1) ಎರಡು ಪೂರ್ಣಾಂಕಗಳ ಮೊತ್ತ ಯಾವಾಗಲೂ ಪೂರ್ಣಾಂಕವಾಗಿರುತ್ತದೆ

(2) ಎರಡು ಪೂರ್ಣಾಂಕಗಳ ವ್ಯತ್ಯಾಸ ಯಾವಾಗಲೂ ಪೂರ್ಣಾಂಕವಾಗಿರುತ್ತದೆ

(3) ಎರಡು ಪೂರ್ಣಾಂಕಗಳ ಗುಣಲಬ್ಧ ಯಾವಾಗಲೂ ಪೂರ್ಣಾಂಕವಾಗಿರುತ್ತದೆ

(4) ಒಂದು ಪೂರ್ಣಾಂಕವನ್ನು ಮತ್ತೊಂದರಿಂದ ಭಾಗಿಸಿದಾಗ ಬರುವ ಭಾಗಲಬ್ಧ ಯಾವಾಗಲೂ ಪೂರ್ಣಾಂಕವಾಗಿರುತ್ತದೆ

101. ಒಂದು ತರಗತಿಯ 42 ವಿದ್ಯಾರ್ಥಿಗಳಲ್ಲಿ $\frac{2}{7}$ ರಷ್ಟು ವಿದ್ಯಾರ್ಥಿಗಳು ವಾಲಿಬಾಲ್‌ನ್ನು, $\frac{3}{7}$ ರಷ್ಟು ವಿದ್ಯಾರ್ಥಿಗಳು ಕರಾಟೆಯನ್ನು ಮತ್ತು ಉಳಿದವರು ಕಬಡ್ಡಿಯನ್ನು ಅಭ್ಯಾಸ ಮಾಡಿದರೆ ಕಬಡ್ಡಿಯನ್ನು ಅಭ್ಯಾಸ ಮಾಡಿದ ವಿದ್ಯಾರ್ಥಿಗಳ ಸಂಖ್ಯೆ

(1) 18 (2) 12

(3) 30 (4) 24

102. ಸೊನ್ನೆಯನ್ನು ಹೊರತುಪಡಿಸಿ ಯಾವುದೇ ಭಿನ್ನರಾಶಿಯನ್ನು ಅದರ ವಿಲೋಮದ ಜೊತೆ ಗುಣಿಸಿದಾಗ ಗುಣಲಬ್ಧವು

(1) 0 (2) 1

(3) –1 (4) ಅದೇ ಭಿನ್ನರಾಶಿಯಾಗಿರುತ್ತದೆ

SPACE FOR ROUGH WORK



Visit CollegeDekho

**103.** ಒಂದು ತೆಳುವಾದ ಆಯತಾಕಾರದ ಲೋಹದ ಹಾಳೆಯ ಉದ್ದವು $3\frac{1}{2}$m ಮತ್ತು ಅಗಲವು $2\frac{1}{2}$m ಆಗಿದೆ. ಈ ಲೋಹದ ಹಾಳೆಯ ವಿಸ್ತೀರ್ಣವು

(1) $8\frac{1}{4}m^2$ (2) $6\frac{1}{4}m^2$

(3) $8\frac{3}{4}m^2$ (4) $8\frac{1}{2}m^2$

**104.** $\frac{x}{y} = \frac{3}{2}$ ಆದಾಗ $\frac{x+y}{x-y}$ ನ ಬೆಲೆಯು

(1) 5 (2) $\frac{1}{5}$

(3) $\frac{2}{3}$ (4) 2

**105.** ಒಂದು ಪೆನ್ನಿನ ಬೆಲೆ ₹ 8.5 ಮತ್ತು ಒಂದು ಪೆನ್ಸಿಲ್‌ನ ಬೆಲೆ ₹ 5.5 ಆಗಿದೆ. ಹಾಗಾದರೆ ಒಂದು ಡಜ಼ನ್ ಪೆನ್ ಮತ್ತು ಅರ್ಧ ಡಜ಼ನ್ ಪೆನ್ಸಿಲ್‌ಗಳ ಬೆಲೆಯು

(1) ₹ 130 (2) ₹ 102

(3) ₹ 120 (4) ₹ 135

**106.** $\left(6\frac{1}{a} \times b\frac{1}{5}\right) = 20$ ಆದಾಗ $a$ ಮತ್ತು $b$ ಬೆಲೆಗಳು ಕ್ರಮವಾಗಿ

(1) 4 ಮತ್ತು 3 (2) 3 ಮತ್ತು 4

(3) 2 ಮತ್ತು 3 (4) 1 ಮತ್ತು 5

SPACE FOR ROUGH WORK

Visit CollegeDekho

107. ಒಬ್ಬ ಕ್ರೀಡಾಪಟು (ಅಥ್ಲೀಟ್) 200 ಮೀಟರ್ ಓಟವನ್ನು 24 ಸೆಕೆಂಡ್‌ಗಳಲ್ಲಿ ಓಡುತ್ತಾನೆ. km/hrಗಳಲ್ಲಿ ಅವನ ಜವವು

(1) 24 km/hr (2) 20 km/hr

(3) 30 km/hr (4) 40 km/hr

108. 7,500 ಜನಸಂಖ್ಯೆಯಿರುವ ಒಂದು ಹಳ್ಳಿಯಲ್ಲಿ ಶೇ. 5ರಷ್ಟು ಅನಕ್ಷರಸ್ಥರಿದ್ದರೆ, ಅಕ್ಷರಸ್ಥರ ಸಂಖ್ಯೆಯು


(1) 7025 (2) 7225 (3) 375 (4) 7125

109. ಎರಡು ಸಂಪೂರಕ ಕೋನಗಳು 5:4ರ ಅನುಪಾತದಲ್ಲಿದ್ದರೆ ಆ ಎರಡು ಕೋನಗಳು

(1) $50^\circ$ ಮತ್ತು $40^\circ$ (2) $100^\circ$ ಮತ್ತು $80^\circ$

(3) $120^\circ$ ಮತ್ತು $60^\circ$ (4) $110^\circ$ ಮತ್ತು $70^\circ$

110. ಕೊಟ್ಟಿರುವ ಚಿತ್ರದಲ್ಲಿ $\angle ACD = 115^\circ$ $\angle A = 3x$, $\angle B = 2x$, ಆದಾಗ '$x$' ನ ಬೆಲೆಯು




(1) $30^\circ$ (2) $25^\circ$ (3) $23^\circ$ (4) $35^\circ$

111. ಕೆಲ ಅಂಕಗಳ ಮಧ್ಯಾಂಕ ಮತ್ತು ಸರಾಸರಿಗಳು ಕ್ರಮವಾಗಿ 40 ಮತ್ತು 38 ಆದಾಗ ನೈಜ ಬಹುಲಕವು

(1) 44 (2) 40 (3) 38 (4) 39

**SPACE FOR ROUGH WORK**

78/2 = 35 + 2



Visit CollegeDekho

**112.** ಈ ದತ್ತಾಂಶಗಳ ಸರಾಸರಿಯು 21.5 ಆದಾಗ, '$x$'ನ ಬೆಲೆಯು

| | | | | | |
|---|---|---|---|---|---|
| $x$ : | 15 | 5 | 25 | 35 | 45 |
| $f$ : | 4 | 6 | 3 | $x$ | 2 |

(1) 5 (2) 10 (3) 15 (4) 25

**113.** ಒಂದು ವರ್ಗಾಂತರದ ಮಧ್ಯಬೆಲೆಯು 52. ಅದರ ವರ್ಗಾಂತರದ ಗಾತ್ರ 10 ಆದಾಗ ಆ ವರ್ಗಾಂತರದ ಮೇಲ್ಮಿತಿ ಮತ್ತು ಕೆಳಮಿತಿಗಳು ಕ್ರಮವಾಗಿ

(1) 47, 57 (2) 57, 47 (3) 47.5, 57.5 (4) 57.5, 47.5

**114.** $p, q, r, s$ ಮತ್ತು $t$ಗಳು ಐದು ಅನುಕ್ರಮ ಧನ ಬೆಸ ಪೂರ್ಣಾಂಕಗಳಾದಾಗ ಅವುಗಳ ಸರಾಸರಿಯು

(1) $\frac{pqrs}{5}$ (2) $\frac{p+4}{5}$ (3) $(p+4)$ (4) $2(p+4)$

**115.** ಒಂದು ಹಿಸ್ಟೋಗ್ರಾಂ ನಕ್ಷೆಯಲ್ಲಿ ಪ್ರತಿ ವರ್ಗಾಂತರದ ಆಯತವನ್ನು ರಚಿಸಲು ಪಾದವಾಗಿ ಪರಿಗಣಿಸಬೇಕಾದ ಅಂಶವು

(1) ವರ್ಗಾಂತರ ಗಾತ್ರ (2) ವರ್ಗಾಂತರದ ಮಧ್ಯ ಬಿಂದು

(3) ಆವೃತ್ತಿ (4) ಸಂಚಿತಾವೃತ್ತಿ

**SPACE FOR ROUGH WORK**



Visit CollegeDekho

116. ಸಂಚಿತಾವೃತ್ತಿ ವಿತರಣೆಯನ್ನು ಪ್ರತಿನಿಧಿಸುವ ನಕ್ಷೆ

(1) ಆವೃತಾಂಕ ಬಹುಭುಜಾಕೃತಿ

(2) ಸ್ತಂಭಾಲೇಖಾ

(3) ಓಜೀವ್

(4) ಹಿಸ್ಟೋಗ್ರಾಂ

117. ತಂದೆ ಮತ್ತು ಮಗನ ಈಗಿನ ವಯಸ್ಸುಗಳ ಅನುಪಾತವು 7 : 3 ಆಗಿದೆ. 10 ವರ್ಷಗಳ ನಂತರ ಅವರ ವಯಸ್ಸುಗಳ ಅನುಕ್ರಮ ಅನುಪಾತವು 9 : 5 ಆದಾಗ ಮಗನ ಈಗಿನ ವಯಸ್ಸು

(1) 15 ವರ್ಷಗಳು (2) 10 ವರ್ಷಗಳು (3) 45 ವರ್ಷಗಳು (4) 20 ವರ್ಷಗಳು

118. ಒಂದು ಡಬ್ಬಿಯಲ್ಲಿ ರೂ. 270 ಹಣವಿದೆ, ಆ ಹಣದಲ್ಲಿ ರೂಪಾಯಿ ಒಂದು, ಪೈಸೆ 50 ಮತ್ತು ಪೈಸೆ 25 ನಾಣ್ಯಗಳು 2 : 3 : 4ರ ಅನುಪಾತದಲ್ಲಿದ್ದರೆ, ಆ ಡಬ್ಬಿಯಲ್ಲಿರುವ 25 ಪೈಸೆ ನಾಣ್ಯಗಳ ಸಂಖ್ಯೆ

(1) 60 (2) 90 (3) 120 (4) 200

119. 5, 7 ಮತ್ತು 15 ಸಂಖ್ಯೆಗಳ ಚತುರ್ಥ ಅನುಪಾತವು

(1) 25 (2) 21 (3) 27 (4) 15

120. 9 ಮತ್ತು $x$ರ ಗುಣೋತ್ತರ ಮಾಧ್ಯವು 6 ಆದಾಗ '$x$' ನ ಬೆಲೆಯು

(1) 6 (2) 9 (3) 4 (4) 8

SPACE FOR ROUGH WORK

KM



Visit CollegeDekho

## KANNADA MEDIUM

## PART – V

## ENVIRONMENTAL SCIENCE

**121.** ವಿದ್ಯುದವಿಭಾಜ್ಯಕ್ಕೆ ಒಂದು ಉದಾಹರಣೆ

(1) NaCl (2) $CH_3COOH$ (3) $C_6H_6$ (4) $H_2SO_4$

**122.** ಇವುಗಳಲ್ಲಿ ಸೌದೆ ಅನಿಲದ (wood gas) ಪ್ರಮುಖ ಘಟಕ

(1) ಬ್ಯುಟೇನ್ (2) ಮೀಥೇನ್ (3) ಈಥೇನ್ (4) ಪ್ರೋಪೇನ್

**123.** ಇವುಗಳಲ್ಲಿ ಹೊಂದಾಣಿಕೆಯ ಸರಿಯಾದ ಕ್ರಮವನ್ನು ಗುರುತಿಸಿ :

| | | | |
|---|---|---|---|
| (a) | ವಿಟಮಿನ್ A | (i) | ಹಲ್ಲು ಮತ್ತು ಮೂಳೆಗಳ ಬೆಳವಣಿಗೆಗೆ ಸಹಾಯಕ |
| (b) | ವಿಟಮಿನ್ C | (ii) | ರಿಕೆಟ್ಸ್ ಕಾಯಿಲೆ ತಡೆಯುತ್ತದೆ |
| (c) | ವಿಟಮಿನ್ D | (iii) | ಚರ್ಮದ ಆರೋಗ್ಯ ಮತ್ತು ಕಣ್ಣಿನ ದೃಷ್ಟಿಗಾಗಿ |
| (d) | ವಿಟಮಿನ್ K | (iv) | ರಕ್ತ ಹೆಪ್ಪುಗಟ್ಟಲು |

(1) a-(iii), b-(iv), (c) -(i), (d)-(ii) (2) a-(iii), b-(i), c-(ii), d-(iv)

(3) a-(ii), b-(i), c-(iii), d-(iv) (4) a-(i), b-(ii), c-(iii), d-(iv)

**124.** ಪ್ರೋಟಿಯೇಸ್ ಕಣ್ವದ ಕಾರ್ಯವೆಂದರೆ,

A 111

(1) ಪಿಷ್ಟವನ್ನು ಮಾಲ್ಟೋಸ್ ಆಗಿಸುವುದು

(2) ಪಾಲಿಪೆಪ್ಟೈಡ್‌ಗಳನ್ನು ಪೆಪ್ಟೈಡ್‌ಗಳಾಗಿ ತುಂಡರಿಸುವುದು

(3) ಲ್ಯಾಕ್ಟೋಸ್‌ನ್ನು ಗ್ಲುಕೋಸ್ ಆಗಿಸುವುದು

(4) ಸೂಕ್ರೋಸ್‌ನ್ನು ಗ್ಲುಕೋಸ್ ಆಗಿಸುವುದು

**125.** ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಸಮಯದಲ್ಲಿ ವಾಸಿಸುವ ಒಂದೇ ಪ್ರಭೇದಕ್ಕೆ ಸೇರಿದ ಜೀವಿಗಳ ಗುಂಪಿಗೆ ಹೀಗೆನ್ನುತ್ತೇವೆ

(1) ಜೀವಿ ಸಮುದಾಯ (2) ಪರಿಸರ ವ್ಯವಸ್ಥೆ

(3) ಜೀವಿ ಸಂದಣಿ (4) ಜೀವಿಗೋಳ



Visit CollegeDekho

126. ಈ ಖನಿಜಾಂಶವು ದೇಹದ ದ್ರವವನ್ನು ಸಮತೋಲನದಲ್ಲಿಡಲು ಸಹಕರಿಸುತ್ತದೆ

(1) Zn (2) K (3) I (4) Fe

127. ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆಯಲ್ಲಾಗುವ ಬದಲಾವಣೆ ಎಂದರೆ,

(1) ಹೆಚ್ಚು ಕ್ರಿಯಾಪಟು ಧಾತು ಕಡಿಮೆ ಕ್ರಿಯಾಪಟು ಧಾತುವನ್ನು ಪಲ್ಲಟಗೊಳಿಸುವುದು

(2) ಕಡಿಮೆ ಕ್ರಿಯಾಪಟು ಧಾತು ಹೆಚ್ಚು ಕ್ರಿಯಾಪಟು ಧಾತುವನ್ನು ಪಲ್ಲಟಗೊಳಿಸುವುದು

(3) ಲೋಹ ಮತ್ತು ಅಲೋಹದ ಭಾಗಗಳು ಪರಸ್ಪರ ವಿನಿಮಯಗೊಳ್ಳುವುದು

(4) ಲವಣ ಮತ್ತು ನೀರು ಉಂಟಾಗುವುದು

128. ಕ್ಲೋರಿನ್ ಅನಿಲವು ನೀಲಿ ಲಿಟ್ಮಸ್‌ನ್ನು ಕೆಂಪು ಬಣ್ಣಕ್ಕೆ ಬದಲಾಯಿಸುತ್ತದೆ. ಇದು ಕ್ಲೋರಿನ್‌ನ ಈ ಗುಣವನ್ನು ತೋರಿಸುತ್ತದೆ.

(1) ಉಭಯವರ್ತಿ (2) ಪ್ರತ್ಯಾಮ್ಲೀಯ

(3) ಆಮ್ಲೀಯ (4) ತಟಸ್ಥ

129. ಘನ ಅಮೋನಿಯಂ ಕ್ಲೋರೈಡ್‌ನ್ನು ಕಾಸಿದಾಗ, ಅದು ನೇರವಾಗಿ ಅನಿಲ ರೂಪಕ್ಕೆ ಬದಲಾಗುತ್ತದೆ. ಇಲ್ಲಿನ ಪ್ರಕ್ರಿಯೆಯು

(1) ಆವೀಕರಣ (2) ಘನೀಕರಣ

(3) ಉತ್ಪತನ (4) ದ್ರವನ

130. ಇವುಗಳಲ್ಲಿ ದ್ರಾವಣಕ್ಕೆ ಸಂಬಂಧಿಸಿದಂತೆ ತಪ್ಪಾದ ವಾಕ್ಯವನ್ನು ಗುರುತಿಸಿ.

(1) ದ್ರಾವಣವು ಸಮರೂಪ ಮಿಶ್ರಣವಾಗಿದೆ

(2) ಕಣಗಳ ಗಾತ್ರ ಬಹಳ ಕಡಿಮೆ ಇರುತ್ತದೆ

(3) ಸೋಸುವಿಕೆಯಿಂದ ದ್ರಾವ್ಯ ಕಣಗಳನ್ನು ಬೇರ್ಪಡಿಸಬಹುದಾಗಿದೆ

(4) ಕಣಗಳು ಬೆಳಕಿನ ಕಿರಣವನ್ನು ಚದುರಿಸಲಾರವು



Visit CollegeDekho

131. ನೀಲಿ ಶಾಯಿಯಲ್ಲಿರುವ ವರ್ಣ ಘಟಕಾಂಶ (Dye)ವನ್ನು ಬೇರ್ಪಡಿಸಲು ಬಳಸುವ ವಿಧಾನ

(1) ಉತ್ಪತನ
(2) ಆಸವನ
(3) ಆವೀಕರಣ
(4) ಸೋಸುವಿಕೆ

132. ನ್ಯೂಟನ್‌ರವರ ಚಲನೆಯ ಎರಡನೇ ನಿಯಮದ ಗಣಿತೀಯ ರೂಪವೆಂದರೆ

(1) $F=\frac{w}{s}$
(2) $F=m\times a$
(3) $F=m\times v$
(4) $F=G\frac{m_1 m_2}{d^2}$

133. ಅಮೀಬಾದಲ್ಲಿ ಚಲನೆಗೆ ಸಹಕರಿಸುವ ರಚನೆಯೆಂದರೆ

(1) ಮಿಥ್ಯಪಾದ
(2) ಕರಬಳ್ಳಿ
(3) ಕಶಾಂಗ
(4) ಪಿಲ್ಲೈ

134. ಹೈಡ್ರಾದಲ್ಲಿ ಅಲೈಂಗಿಕ ಸಂತಾನೋತ್ಪತ್ತಿಯ ರಚನೆಗಳು

(1) ಕರಬಳ್ಳಿಗಳು
(2) ಮೊಗ್ಗುಗಳು
(3) ಜ್ವಾಲಾಕೋಶಗಳು
(4) ಜೆಮ್ಮಾ ಬಟ್ಟಲುಗಳು

135. ವಿದ್ಯುತ್ ಆವೇಶದ ಅಂತಾರಾಷ್ಟ್ರೀಯ ಏಕಮಾನವೆಂದರೆ

(1) ಓಮ್
(2) ಆಂಪೀಯರ್
(3) ಕಿಲೋವ್ಯಾಟ್ ಗಂಟೆ
(4) ಕೂಲಂಬ್

136. ಇವುಗಳಲ್ಲಿ ಜೈವಿಕ ಶಿಥಿಲೀಯವಾಗದೇ ಇರುವ ವಸ್ತುವೆಂದರೆ

(1) ಡಿ.ಡಿ.ಟಿ.
(2) ಹತ್ತಿಯ ಬಟ್ಟೆ
(3) ಕಾಗದದ ಚೀಲ
(4) ಸಾವಯವ ಗೊಬ್ಬರ



Visit CollegeDekho

137. ಇವುಗಳಲ್ಲಿ ಒಂದು ಪ್ರೋಟಾನ್ ಮತ್ತು ಎರಡು ನ್ಯೂಟ್ರಾನ್‌ಗಳನ್ನು ಹೊಂದಿರುವ ಜಲಜನಕದ ಒಂದು ಐಸೋಟೋಪು

(1) ಟ್ರೀಟಿಯಂ  (2) ಹೀಲಿಯಂ

(3) ಪ್ರೋಟಿಯಂ  (4) ಡ್ಯುಟೀರಿಯಂ


138. ಕೊಟ್ಟಿರುವ ಆಹಾರ ಸರಪಳಿಯಲ್ಲಿ ದ್ವಿತೀಯ ಭಕ್ಷಕರನ್ನು ಗುರುತಿಸಿ.


ಆಹಾರ ಸರಪಳಿ


ಹುಲ್ಲು → ಮಿಡತೆ → ಕಪ್ಪೆ → ಹಾವು → ಹದ್ದು


(1) ಹಾವು  (2) ಹುಲ್ಲು  (3) ಕಪ್ಪೆ  (4) ಮಿಡತೆ

139. ಇವುಗಳಲ್ಲಿ ಸ್ಥಿರ ಜವವನ್ನು ತೋರಿಸುವ ನಕ್ಷೆಯು ಇದಾಗಿದೆ.

(1)



(2)



(3)



(4)





Visit CollegeDekho

140. ಹೂವಿನ ಅತ್ಯಂತ ಒಳಭಾಗವನ್ನು ಹೀಗೆಂದು ಕರೆಯುತ್ತಾರೆ

(1) ಕೇಸರ
(2) ಕಾರ್ಪೆಲ್
(3) ಪರಾಗಕೋಶ
(4) ಪುಷ್ಪದಳ

141. ಸಸ್ಯಗಳು ಬಹಳಷ್ಟು ನೀರನ್ನು ತಮ್ಮ ದೇಹದಿಂದ ಈ ಪ್ರಕ್ರಿಯೆಯ ಮೂಲಕ ದ್ರವರೂಪದಲ್ಲಿ ಹೊರಹಾಕುತ್ತವೆ

(1) ಘನೀಕರಣ
(2) ಬಾಷ್ಪೀಕರಣ
(3) ಆವೀಕರಣ
(4) ಗಟೇಶನ್

142. ಕುತ್ತಿಗೆಯು ತಲೆಯನ್ನು ಸೇರುವ ಕೀಲಿಗೆ ಹೀಗೆನ್ನುತ್ತೇವೆ

(1) ತಿರುಗಾಣಿ
(2) ಗೋಲ ಮತ್ತು ಗುಳಿ
(3) ಬಿಜಗಾಂ
(4) ಸ್ಥಿರ

143. ಪೋಲಾಂಡ್, ಚೆಕ್ ಗಣರಾಜ್ಯ ಮತ್ತು ಆಗ್ನೇಯ ಜರ್ಮನಿಗಳನ್ನು 'ಕಪ್ಪು ತ್ರಿಕೋನ ಪ್ರದೇಶ'ಗಳೆನ್ನಲು ಕಾರಣವೆಂದರೆ, ಈ ಪ್ರದೇಶಗಳು

(1) ಹೆಚ್ಚು ಆಮ್ಲ ಮಳೆಯ ಪರಿಣಾಮಕ್ಕೆ ಒಳಪಟ್ಟಿರುತ್ತವೆ
(2) ಹೆಚ್ಚು ಹಸಿರು ಮನೆ ಪರಿಣಾಮವನ್ನು ಹೊಂದಿರುತ್ತವೆ
(3) ಹೆಚ್ಚು ಕಲ್ಲಿದ್ದಲ್ಲಿನ ಗಣಿಗಳನ್ನು ಹೊಂದಿರುತ್ತವೆ
(4) ಹೆಚ್ಚು ಪೆಟ್ರೋಲಿಯಂ ಉತ್ಪನ್ನಗಳನ್ನು ಉತ್ಪಾದಿಸುತ್ತವೆ



Visit CollegeDekho

144. ಆಮ್ಲ ಮಳೆಗೆ ಕಾರಣವಾಗುವ ರಾಸಯನಿಕಗಳೆಂದರೆ

(1) ಸಲ್ಫರ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಮಾನಾಕ್ಸೈಡ್

(2) ನೈಟ್ರೋಜನ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

(3) ಸಲ್ಫರ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ ಆಕ್ಸೈಡ್

(4) ಕಾರ್ಬನ್ ಡೈ ಆಕ್ಸೈಡ್ ಮತ್ತು ಕಾರ್ಬನ್ ಮಾನಾಕ್ಸೈಡ್

145. ಪ್ರಾತ್ಯಕ್ಷಿಕೆಯೊಂದರಲ್ಲಿ ವಿಜ್ಞಾನ ಶಿಕ್ಷಕರು ಮೆಗ್ನೀಷಿಯಂ ತಂತಿಯನ್ನು ತೆಗೆದುಕೊಂಡು, ಹೊರಪದರವನ್ನು ಮರಳು ಕಾಗದದಿಂದ ಉಜ್ಜಿ ನಂತರ ಉರಿಸಿದರು. ಈ ಪ್ರಾತ್ಯಕ್ಷಿಕೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ತಮಗಿದ್ದ ಕುತೂಹಲ ಕುರಿತು ಚರ್ಚಿಸುತ್ತಾ ಅದರ ಸಂಯೋಗ ಕ್ರಿಯೆಯನ್ನು ಸಾಮಾನ್ಯೀಕರಿಸಿದರು. ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಈ ವಿಧಾನವನ್ನು ಹೀಗೆ ಹೆಸರಿಸುತ್ತಾರೆ

(1) ಕ್ರಮಾನುಗತ ಕಲಿಕೆ

(2) ವರ್ತನಾ ರೂಪದ ಕಲಿಕೆ

(3) ಸಮ್ಮಿಳಿತ ಕಲಿಕೆ

(4) ರಚನಾತ್ಮಕ ಕಲಿಕೆ

146. ಇವುಗಳಲ್ಲಿ ನಾಲ್ಕನೇ ತರಗತಿ ವಿದ್ಯಾರ್ಥಿಗಳಿಗೆ "ಸಸ್ಯಗಳ ವಿಧ"ಗಳನ್ನು ಅರ್ಥೈಸಲು ಅನುಕೂಲಿಸುವ ಉತ್ತಮ ವಿಧಾನವೆಂದರೆ

(1) ಸಸ್ಯಗಳ ವಿಧಗಳನ್ನು ಪರಸ್ಪರ ಚರ್ಚಿಸುವುದು

(2) ವಿದ್ಯಾರ್ಥಿಗಳಿಗೆ ಟಿಪ್ಪಣಿ ಬರೆಯಲು ತಿಳಿಸುವುದು

(3) ಸಸ್ಯಗಳ ಚಿತ್ರಪಟ ಪ್ರದರ್ಶಿಸುವುದು

(4) ಹತ್ತಿರದ ಉದ್ಯಾನವನಕ್ಕೆ ಕರೆದೊಯ್ದು ವಿವರಿಸುವುದು



Visit CollegeDekho

**147.** ಒಬ್ಬ ವಿದ್ಯಾರ್ಥಿಯು ಅಂಗಡಿಯೊಂದರಲ್ಲಿ 1 kg ತುಪ್ಪವನ್ನು ಖರೀದಿಸುತ್ತಾನೆ. ಅದರ ಪ್ಯಾಕೇಟ್ ಮೇಲೆ 1 kg ಇರುವ ಬದಲಿಗೆ 900 ml ಎಂದು ಮುದ್ರಿತವಾಗಿರುವುದನ್ನು ಗಮನಿಸುತ್ತಾ ಅಂಗಡಿಯವನಲ್ಲಿ ಚರ್ಚಿಸುತ್ತಾನೆ. ಅದನ್ನು ಕಲಿಕೆಯ '5E' ಮಾದರಿಯಲ್ಲಿ ಹೀಗೆನ್ನುತ್ತಾರೆ

(1) ತೊಡಗಿಸುಕೊಳ್ಳುವಿಕೆ
(2) ಅನ್ವೇಷಣೆ
(3) ವಿಸ್ತರಣೆ
(4) ಮೌಲ್ಯಮಾಪನ

**148.** 'ಬೇರುಗಳು ಗುರುತ್ವಾನವರ್ತಣೆಯನ್ನು ತೋರುತ್ತವೆ' – ಈ ಪರಿಕಲ್ಪನೆಯನ್ನು ಐದನೇ ತರಗತಿ ವಿದ್ಯಾರ್ಥಿಗಳಿಗೆ ಅನುಕೂಲಿಸಲು ಸೂಕ್ತವಾದ ವಿಧಾನವೆಂದರೆ,

(1) ಚಿತ್ರ ರಚನೆ
(2) ಛಾಯಾಚಿತ್ರ ಪ್ರದರ್ಶನ
(3) ನೇರಾನುಭವ ಚಟುವಟಿಕೆ
(4) ವೀಡಿಯೋ ಪ್ರಸ್ತುತಿ

**149.** ಮಕ್ಕಳಿಗೆ ಪರಿಸರ ಸಂರಕ್ಷಣೆ ಮತ್ತು ಕಾಳಜಿ ಕುರಿತು ಅರ್ಥೈಸುವಾಗ ಶಿಕ್ಷಕರು ಸಾಲು ಮರದ ತಿಮ್ಮಕ್ಕನ ಕಥೆಯನ್ನು ಹೇಳುತ್ತಿರುವರು. ಇದರಿಂದ ಗುರ್ತಿಸಿಕೊಳ್ಳ ಬಹುದಾದ ಪ್ರಜ್ಞೆ

(1) ಐತಿಹಾಸಿಕ ಮೌಲ್ಯ
(2) ಪಾರಿಸಾರಿಕ ಮೌಲ್ಯ
(3) ಸೌಂದರ್ಯ ಮೌಲ್ಯ
(4) ನೈತಿಕ ಮೌಲ್ಯ

**150.** ಎರಡನೇ ತರಗತಿ ವಿದ್ಯಾರ್ಥಿಗಳಿಗೆ ಜಲವಾಸಿ ಪ್ರಾಣಿಗಳ ಪರಿಕಲ್ಪನೆಯಲ್ಲಿ ಸ್ಪಷ್ಟತೆ ತರಲು ಇದೊಂದು ಸೂಕ್ತ ವಿಧಾನವಾಗಿದೆ.

(1) ಜಲಚರ ಸಂಗ್ರಹಾಲಯ (aquarium) ತೋರಿಸಿ ವಿವರಿಸುವುದು
(2) ಕಪ್ಪು ಹಲಗೆ ಮೇಲೆ ಚಿತ್ರ ಬಿಡಿಸುವುದು
(3) ಚಿತ್ರಪಟವನ್ನು ತೋರಿಸುವುದು
(4) ಪಠ್ಯವನ್ನು ಯಥಾವತ್ತಾಗಿ ಬೋಧಿಸುವುದು

12
03
10
20
20
21
86



Visit CollegeDekho